॥ ಕೊಡಗಿಗೆ ಸುಧಾರಣೆ ॥

ಶ್ರೀ ದೇಶಬಂಧು ಗುಪ್ತರ ವಾದ.

ತಾರೀಕು ೧೦-೮-೧೯೫೧ ರ 'ಕೊಡಗು' ಪತ್ರಿಕೆಯ ಸಂಪಾದಕೀಯ ಲೇಖನದ ಕಡೆ ನನ್ನ ದೃಷ್ಟಿ ಸೆಳೆಯಲ್ಪಟ್ಟಿದೆ. ಆ ಲೇಖನದಲ್ಲಿ ಕೊಡಗಿಗೆ ಸುಧಾರಣೆ ಹೊರೆಯಲು ಪಾರ್ಲಿಮೆಂಟ್ ಸದಸ್ಯರಾದ ಶ್ರೀ. ಸಿ. ಎಂ. ಪೂಣಚ್ಚನವರು ಏನೂ ಸಹಾಯ ಮಾಡಿಲ್ಲ; ಬದಲು ಸುಧಾರಣೆಯು ಇತರ ಜನರ ಪ್ರಯತ್ನದಿಂದ ಹೊರೆತದ್ದು ಎಂದು ಮುಂತಾಗಿ ಹೇಳಲಾಗಿದೆ. 'ಸಿ' ಭಾಗದ ಸಭೆಯು ನುತ್ತ ಆರಂಭದಿಂದಲೇ ಘಟನಾ ಸಭೆಯ ಸದಸ್ಯನಾದ ನಾನು 'ಕೊಡಗು' ಪತ್ರಿಕೆಯ ಸಂಪಾದಕೀಯದ ಈ ಆರೋಪಣೆಯನ್ನು ಬಲವತ್ತರವಾಗಿ ಉಪೇಕ್ಷಿಸಬೇಕಿದೆ.

ಕೊಡಗಿನ ಸಾರ್ವಜನಿಕರ ಮುಂದೆ ನಾನು ಈ ಕೆಳಗಿನ ನಿಜಸಂಗತಿಯನ್ನಿಡಲು ಆಶಿಸುತ್ತೇನೆ. ಕೇಂದ್ರದಿಂದ ಅಳಿಲ್ಪಡುವ ಈ ಭಾಗಗಳ ಆಡಳಿತ ರಚನೆಯು ಬದಲಾವಣೆಯು ಬಗ್ಗೆ ರಾಜ್ಯಪುನರ್ ಸಭೆಯಲ್ಲಿ ಡೆಲ್ಲಿ, ಕೊಡಗು ಹಾಗು ಅಜಮೀರದ ಪ್ರತಿನಿಧಿಗಳಾದ ನಾವು ಮೂರು ಜನ ಹೋರಾಟ ನಡೆಸಬೇಕಿತ್ತು. ಪಂಡಿತ ಜವಾಹರಲಾಲರ ಅಧ್ಯಕ್ಷತೆಯಲ್ಲಿ ನೇಮಕವಾದ ಮೂವರು ಒಕ್ಕೂಟ ಘಟನಾ ಸಮಿತಿಯು ಚೀಫ್ ಕಮಿಷನರ್ ಪ್ರಾಂತಗಳ ಆಡಳಿತವು ೧೯೫೬ ನೇ ಅಕ್ಟೋಬರ್‌ನಲ್ಲಿ ನಡೆಯುವುದೆಂದು ನಿರ್ಧಾರವನ್ನು ಮಾಡಿದಂದಿನಿಂದಲೇ ಈ ಹೋರಾಟ ಪ್ರಾರಂಭವಾಯಿತು. ಈ ನಿರ್ಧಾರವನ್ನು ಹಿಂದೂದೇಶವು ಪಡೆದ ಸ್ವಾತಂತ್ರ್ಯದ ಪೂರ್ಣ ನಕಾರವೆಂದು ನನಗೆನಿಸಿತು. ಆದ್ದರಿಂದ ೩೦೦ ಸದಸ್ಯರಿರುವ ಘಟನಾಸಮಿತಿಯಲ್ಲಿ ಕೂರುವ ನಾವು ಪ್ರತಿ ಮೆಂಬರನ ಸಹಾನುಭೂತಿಯನ್ನು ಪಡೆಯಲು ಯತ್ನಿಸಬೇಕಾಗಿ ಬಂತು. ಕಡೆಗೆ ಚೀಫ್ ಕಮಿಷನರ್ ಪ್ರಾಂತಗಳ ಆಡಳಿತ ರಚನೆಯ ಬಗ್ಗೆ ಪರಿಶೀಲಿಸಲು ಪ್ರತ್ಯೇಕ ಸಮಿತಿಯೊಂದನ್ನು ಡಾ. ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನೇವಿಸುವಂತೆ ಮಾಡಲು ಸಮರ್ಥರಾದೆವು. ನಾವು ಮೂರು ಜನರೂ ಈ ಸಮಿತಿಯ ಸದಸ್ಯರಾಗಿದ್ದೆವು. ಅನೇಕ ಪರಿಶೀಲನೆ ಮತ್ತು ಚರ್ಚೆಯ ನಂತರ ನಾವು ಒಮ್ಮತದ ವರದಿಯೊಂದನ್ನು ಒಪ್ಪಿಸಿದೆವು. ಇದೇ ನಂತರ ರಾಜ್ಯಪುನರ್ ಘಟನೆಯ ೨೪೦ ನೇ ನಿಬಂಧನೆಗೆ ತಳಹದಿಯಾಯಿತು.

ರಾಜ್ಯಪುನರ್‌ಘಟನೆಯಲ್ಲಿ ಈ ನಿಬಂಧನೆಯು ಅಳವಡಿಸಲ್ಪಟ್ಟ ನಂತರ ಈ ನಿಬಂಧನೆಯನ್ನು ಇತರ ಚೀಫ್ ಕಮಿಷನರ ಪ್ರಾಂತಗಳಿಗೆ ವಿಸ್ತರಿಸುವ ಸಂದರ್ಭ ಬಂದಿತು. ಅದೃಷ್ಟವಶಾತ್ ಚೀಫ್ ಕಮಿಷನರ ಪ್ರಾಂತಗಳ ಸಂಖ್ಯೆಯು ಹೆಚ್ಚಾಗಿ ರಾಜ್ಯಪುನರ್ ಸಭೆಯಲ್ಲಿದ್ದ ಪಕ್ಷ ಸಂಖ್ಯೆಯು ೩ ರಿಂದ ೧೦ಕ್ಕೆ ಏರಿತು. ಇದು ನಮಗೆ ಶಕ್ತಿಯನ್ನು ಕೊಟ್ಟಿತಲ್ಲದೆ ನಮ್ಮ ವಾದಕ್ಕೆಯು ಬಲಗೊಂಡಿತು. ಆದರೆ ನಮ್ಮ ಬೇಡಿಕೆಗಳಿಗೆ ಸಂಬಂಧಿಸಿದ ಅಧಿಕಾರಿಗಳಿಂದ ಸರಿಯಾಗಿ ಪರಿಶೀಲಿಸಲ್ಪಡುತ್ತಿರಲಿಲ್ಲ. ಆದ್ದರಿಂದ 'ಸಿ' ಸಂಸ್ಥಾಗಳಿಗೆ ಸೇರಿದ ಸಪಕ್ಷರಾದ ನಾವು ಒಂದು ಸಭೆ ಸೇರಿಸಿ 'ಸಿ' ಪ್ರಾಂತಗಳಿಗೆ ಪ್ರಜಾಜವಾಬ್ದಾರಿ ಆಡಳಿತ ಕ್ರಮವನ್ನು ಕೊಡಬೇಕೆಂಬ ನನ್ನ ಒಮ್ಮತದ ಬೇಡಿಕೆಯನ್ನು ಮುಂದಿಟ್ಟೆವು.

೧೯೫೦ ನೇ ಜನವರಿ ಪ್ರತಿನಿಧಿ ಮಸೂದೆಯು ಪಾರ್ಲಿಮೆಂಟಿನಲ್ಲಿ ಬಂದಾಗ ಕೇಂದ್ರ ಸರಕಾರವು 'ಸಿ' ಸಂಸ್ಥಾನಗಳಲ್ಲಿ ರಾಜ್ಯಘಟನೆಯು ೨೪೦ ನೇ ನಿಬಂಧನೆಯನ್ನು ಜಾರಿಗೆ ತರುವದಿಲ್ಲವೆಂದೂ ಅವುಗಳಿಗೆ ಶಾಸನ ಸಭೆಯನ್ನು ಕೊಟ್ಟು ಕೌನ್ಸಿಲ್ ಆಫ್ ಸ್ಟೇಟಿಗೆ ಶಾಸನ ಸಭೆಯಿಂದ ಪ್ರತಿನಿಧಿಯನ್ನು ಆರಿಸುವದಿಲ್ಲವೆಂದೂ ಸ್ಪಷ್ಟ ಪಡಿಸಿದಾಗ ಪುನಹ ಹೋರಾಟ ಪ್ರಾರಂಭವಾಯಿತು. ಒಮ್ಮತದಿಂದ ಈ ಮಸೂದೆಗೆ ವಿರುದ್ಧವಾಗಿ ಹೋರಾಡಿ ಈ ಎಲ್ಲಾ ಯೋಜನೆಯನ್ನು ಬದಲಾಯಿಸಿ ಪ್ರಾಧ್ಯಮತದಾನ ಪದ್ಧತಿಯಂತೆ ರಚಿತವಾದ ಜುನಾಯಿತ ಪ್ರತಿನಿಧಿಗಳ ಗುಂಪನ್ನು ರಚಿಸುವಂತೆ ಸರಕಾರವನ್ನು ಒಪ್ಪಿಸಿದೆವು. ಇಂಥಾ ಚುನಾಯಿತ ಗುಂಪನ್ನು ಸಾಧ್ಯ ಪಾಪರೆ ಅಲ್ಪಸ್ಥಿಯ ಶಾಸನ ಸಭೆಗಳಾಗಿ ಮಾರ್ಪಡಿಸಬಹುದೆಂದು ಸರಕಾರ ಸೂಚಿಸಿತು. 'ಕೊಡಗು' ಸಂಪಾದಕರು ಮೂಲ ಮಸೂದೆಯನ್ನೂ ಅಶರ ಚರ್ಚೆಯ ಸಮಯದಲ್ಲಿ ಶ್ರೀ. ಪೂಣಚ್ಚನವರು ಆಡಿದ ಮಾತುಗಳನ್ನೂ ಓದಬೇಕಿತ್ತು. ಇದರ ನಂತರ ಅನೇಕ ಸದಸ್ಯರು 'ಸಿ' ಭಾಗದ ಸಂಸ್ಥಾನಗಳಿಗೆ ಪ್ರಜಾಜವಾಬ್ದಾರಿ ಯೋಜನೆಯ ಆಡಳಿತ ಕೊಡಬೇಕೆಂಬ ಠರಾವು ಕಳುಹಿದರು. ಈ ವರ್ಷದ ಬಜೆಟ್ ಸಭೆಯ ಠರಾವುಗಳ ಜನೇ ಪಟ್ಟಿಯನ್ನು 'ಕೊಡಗು' ಸಂಪಾದಕರು ನೋಡಿದ್ದಾರೋ ಎಂದು ನನಗೆ ಆಶ್ಚರ್ಯವಾಗುತ್ತದೆ. ಲಾಟ್ರಿ ತೆಗೆದಾಗ ಅಜಮೀರಿನ ನಮ್ಮ ಸ್ನೇಹಿತರ ಠರಾವು ಶ್ರಥನು ಸ್ಥಾನ ಪಡೆದು ಚರ್ಚಿಸಲ್ಪಟ್ಟಿತು. ಆ ಕಾಲಕ್ಕೆ ಕೇಂದ್ರ ಸರಕಾರವು 'ಸಿ' ಭಾಗಗಳಿಗೆ ಸುಧಾರಣೆಯನ್ನು ಕೊಡುವ ಮಸೂದೆಯೊಂದನ್ನು ತರಲಾಗುವದೆಂಬ ಭರವಸೆಯನ್ನು ಕೊಟ್ಟಿತು.

ಈ ಭರವಸೆಯ ಪ್ರಕಾರ ಹೊರಬಂದ ಮಸೂದೆಯು ನಮ್ಮ ಊಹನೆಗೆ ಸರಿಯಾಗಿರಲಿಲ್ಲ. ಆದರಿಂದ ಪುನಹ ಪಮಗೆ ಹೋರಾಡಬೇಕಾಗಿ ಬಂತು. 'ಸಿ' ಭಾಗದ ಪಾರ್ಲಿಮೆಂಟ್ ಸದಸ್ಯರೊಡನೆ ಸಮಾಲೋಚನೆ ನಡೆಸಿದ ನಂತರ ಮಣಿಪುರ, ತ್ರಿಪುರ, ಕಚ್ ಈ ಮೂರು ಗಡಿ ಸಂಸ್ಥಾನಗಳನ್ನು ಬಿಟ್ಟು ಉಳಿದ ಎಲ್ಲಾ 'ಸಿ' ಸಂಸ್ಥಾನಗಳಿಗೆ ರಾಜ್ಯಘಟನೆಯ ೨೪೦ ನೇ ನಿಬಂಧನೆಯಂತೆ ಪೂರ್ಣ ಸುಧಾರಣೆ ಕೊಡಲಾಗುವದೆಂದು ಈಗ ಸಾರಲ್ಪಟ್ಟಿದೆ.

'ಸಿ' ಪ್ರಾಂತಗಳಲ್ಲಿರುವ ಒಬ್ಬ ಮನುಷ್ಯನ ಆಳಿಕೆಯನ್ನು ಬದಲಾಯಿಸಿ, ಸುಧಾರಣೆ ಕೊಡಲು ಶಾಶನ ಸಭೆಯಲ್ಲಿ ಆದ ಅನಿವಾರ್ಯವಾದ ವಿಳಂಬ ಮತ್ತು ವಿವಿಧ ಅಂತಸ್ತುಗಳನ್ನು ಕೊಡಗಿನ ಸಾರ್ವಜನಿಕರಿಗೆ ಪರಿಚಯಮಾಡುವ ದೃಷ್ಟಿಯಿಂದ ಮೇಲಿನ ವಿವರಣೆಯನ್ನು ಕೊಟ್ಟಿದಾಗಿದೆ. ಪಾರ್ಲಿಮೆಂಟಿನಲ್ಲಿ ಇಷ್ಟೆಲ್ಲ ವಿಳಂಬ ವಿರೋಧಗಳಾದರೂ 'ಸಿ' ಪ್ರಾಂತಗಳ ಸದಸ್ಯರು ಒಮ್ಮತದಿಂದ ಯಾವಾಗಲೂ ವರ್ತಿಸಿದರೆಂದು ಹೇಳಲು ಸಂತೋಷಪಡುತ್ತೇನೆ. ಹಿಂದೂದೇಶದ ವಿವಿಧ ಸಮಸ್ಯೆಗಳಿರುವ ವಿವಿಧ ಭಾಗಗಳಿಂದ ಬಂದರೂ ನಾವು ಒಗ್ಗಟ್ಟಿನಿಂದ ವರ್ತಿಸಿದ ಕಾರಣ ಕೇಂದ್ರ ಸರಕಾರವು ನಮ್ಮ ಕೇಳಿಕೆಗಳನ್ನು ಒಪ್ಪಲೇಬೇಕಾಯಿತು. ಪ್ರಾರಂಭದಲೂ ಶ್ರೀ. ಪೂಣಚ್ಚನವರು ಈ ಕಾರ್ಯಕಲಾಪಗಳಲ್ಲಿ ಯೋಗ್ಯ ಭಾಗವಹಿಸಿರುವರು. 'ಕೊಡಗು' ಪತ್ರಿಕೆಯ ಸಂಪಾದಕೀಯ ಲೇಖನದಲ್ಲಿರುವ ಅನ್ಯಾಯದ ದೋಷಾರೋಪಣೆಯು ಕಿಡಿಗೇಡಿತನದ್ದಾಗಿದೆ.

ಕೊಡಗಿನ ಮಟ್ಟಿಗೆ ಹೇಳುವದಾದರೆ ವೈಕ್ತಿಗತವಾಗಿ ನನಗೆ ತಿಳಿದಿರುವಂತೆ ೧೯೫೦ ರ ಪ್ರಾರಂಭದಲ್ಲಿ ಕೊಡಗು ಶಾಸನ ಸಭೆಯಲ್ಲಿ ಕೊಡಗಿಗೆ ಜವಾಬ್ದಾರಿ ಸರಕಾರ ಬೇಕೆಂಬ ಠರಾವು ಒಮ್ಮತದಿಂದ ಪಾಸಾದ ಪ್ರಯುಕ್ತ ಕೊಡಗಿನ ಬೇಡಿಕೆಗೆ ಹೆಚ್ಚಿನ ಬೆಂಬಲ ದೊರೆತಂತಾಯಿತು. ಆ ಠರಾವಿನ ನಂತರ ಸರಕಾರದ ವರ್ತನೆಯು ಬಹು ಮಟ್ಟಿಗೆ ಬದಲಾದುದಲ್ಲದೆ ಕೊಡಗಿನ ಜವಾಬ್ದಾರಿ ಸರಕಾರದ ಬೇಡಿಕೆಯು ಬಲಗೊಂಡಿತು.

'ಕೊಡಗು' ಪತ್ರಿಕೆಯು ಸಂಪಾದಕರಾ ಶ್ರೀ. ಪಿ. ಐ. ಬೆಳ್ಳಪ್ಪನವರ ಆಗಾಗಿನ ಹೆಲ್ಲಿ ಸಂದರ್ಶನದ ಕಾರಣ ಆಪರನ್ನು ಪರಿಚಯವಾಗುವ ಅನುದೊರೆತಿದೆ. ಕೊಡಗಿನ ಬೇಡಿಕೆಯನ್ನು ಶ್ರೀ. ಪೂಣಚ್ಚನವರು ಯೋಗ್ಯರೀತಿಯಿಂದ ಮುಂದಿಟ್ಟಿರುವರೆಂದು ನಾನು ಅನೇಕ ಬಾರಿ ಹೇಳಿರುವೆನು. ಕೊಡಗಿನ ಹೋರಾಟವನ್ನು ಇಷ್ಟೊಂದು ಜಯಪ್ರದವಾಗಿ ನಡೆಸುತ್ತಿರುವ ಶ್ರೀ. ಪೂಣಚ್ಚನವರ ಮೇಲಿನ ಅನ್ಯಾಯದ ದೋಷಾರೋಪಣೆಗಳನ್ನೊಳಗೊಂಡ ಲೇಖನವನ್ನು ಓದಿ ನನಗೆ ಆಶ್ಚರ್ಯವಾಯಿತು. ನಿಜಪರಿಸ್ಥಿತಿ ಹೇಗಿದೆಯೆಂಬುದನ್ನು ಕೊಡಗಿನ ಜನರು ತಿಳಿಯಬೇಕೆಂದು ನಾನು ಇಚ್ಛಿಸುತ್ತೇನೆ. ಚುನಾವಣೆಯು ಹತ್ತಿರ ಬರುತ್ತಿರುವ ಕಾರಣ ಚುನಾವಣಾ ಪ್ರವಾಡ ಮತ್ತು ತತ್ಪಲಹಿತ ಪ್ರಚಾರಗಳು ನಡೆಯುವವು. ಶ್ರೀ. ಬೆಳ್ಳಪ್ಪನವರು ಹಳೆಯ ಪತ್ರಿಕೋದ್ಯೋಗಿಯಾಗಿ ಮೇಲ್ಕಟ್ಟವನ್ನು ಅಳಿಸಿಕೊಳ್ಳುವರಾಗಿ ಆತಿಶಯತ್ನೇನೆ.

ದೇಶಬಂಧು ಗುಪ್ತ.

≡ ಕೊಡಗಿಗೆ ಸುಧಾರಣೆ ≡

ಶ್ರೀ ದೇಶಬಂಧು ಗುಪ್ತರ ವಾದಕ್ಕೆ ಉತ್ತರ.

ಈ ವಿಚಾರವನ್ನು ಕುರಿತು ನಾವು ಆಗಸ್ಟ್ ೧೦ರಲ್ಲಿ ಪ್ರಕಟಿಸಿದ ಅಗ್ರ ಲೇಖನದ ಮೇಲೆ, ಪಾರ್ಲಿಮೆಂಟಿನಲ್ಲಿ ಹೆಲ್ಲಿ ಪ್ರಾಂತದ ಪ್ರತಿನಿಧಿಯೂದ ಶ್ರೀ. ದೇಶಬಂಧುಗುಪ್ತರವರು ಮೂಡಿರುವ ಠೀಕೆಯನ್ನು ಇನ್ನೊಂದು ಕಡೆ ಪ್ರಕಟಿಸಲಾಗಿದೆ. ಈ ಠೀಕೆಯೂದರೂ ಶ್ರೀಗುಪ್ತರವರು ತಾನಾಗಿ ಮೂಡಿದ್ದಲ್ಲವೆಂದೂ, ಇದಕ್ಕೆ ಪಾರ್ಲಿಮೆಂಟಿನಲ್ಲಿ ಕೊಡಗಿನ ಪ್ರತಿನಿಧಿಯೂದ ಶ್ರೀ. ಸಿ. ಎಂ. ಪೂಣಚ್ಚನವರೇ ಕಾರಣವೆಂದೂ ಸ್ಪಷ್ಟವಾಗುತ್ತದೆ. ಏಕೆಂದರೆ ಡೆಲ್ಲಿಯಲ್ಲಿರುವ ಶ್ರೀಗುಪ್ತರವರಿಗೆ 'ಕೊಡಗು' ಪತ್ರಿಕೆಯು ಹೋಗುತ್ತಿರುವುದಿಲ್ಲ. ಇದು ಅವರಿಗೆ ಸಿಕ್ಕಿದರೂ ಅವರಿಗೆ ಕನ್ನಡ ನ್ಯೂಗೊತ್ತಿರುವುದಿಲ್ಲ. ಅಲ್ಲದೆ ಕೊಡಗಿನ ಭವಿಷ್ಯತ್ತಿನ ವಿಚಾರ ಇಲ್ಲಿಯ ಜನರ ಅಭಿಪ್ರಾಯ ಹೇಗಿದೆಯೆಂಬುದು ಇವರಿಗೆ ಸ್ಪಷ್ಟವಾಗಿ ಗೊತ್ತಿದೆಯೆಂದು ಹೇಳಲಾಗುವುದಿಲ್ಲ. ಇವರ ಆ ಲೇಖನದ ಉದ್ದಿಶ್ಯವು ಶ್ರೀ ಪೂಣಚ್ಚನವರನ್ನು ಮುಂಬರುವ ಚುನಾವಣೆಯ ದೃಷ್ಟಿಯಿಂದ ಕೊಡಗಿನ ಜನತೆಯು ಮುಂದೆ ಪ್ರಶಂಸಿಸುವುದಾಗಿದೆಯೆಂದರೆ ತಪ್ಪಾಗಲಾರದು. ಆದ್ದರಿಂದ ಈ ಲೇಖನವು ಶ್ರೀ ಪೂಣಚ್ಚನವರ ಪ್ರೇರಣೆಯಿಂದ ಬರೆಯಿಸಲ್ಪಟ್ಟಿದೆಯೆಂದು ಊಹಿಸಿದರೆ ತಪ್ಪಾಗಲಾರದು.

ಶ್ರೀ ಗುಪ್ತರವರ ಠೀಕೆಗಳನ್ನು ವಿಮರ್ಶಿಸುವ ಮುಂಚಿತವಾಗಿ ಶ್ರೀ ಪೂಣಚ್ಚನವರು ಯಾವ ರೀತಿಯಲ್ಲಿ ರಾಜ್ಯಘಟನಾಸಭೆಗೆ ನಂತರ ಪಾರ್ಲಿಮೆಂಟ್ ಸಭೆಗೆ ಆರಿಸಲ್ಪಟ್ಟಿದ್ದರೆಂಬುದನ್ನು ಸ್ವಲ್ಪ ಸ್ಮರಿಸಿಕೊಳ್ಳಬೇಕಾಗಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಬ್ರಿಟಿಷ್ ಸರಕಾರವು ಸೂಚಿಸಿದ ರಾಜ್ಯಘಟನಾ ಸಭೆಯು ಏರ್ಪಾಡನ್ನು ಒಪ್ಪುವ ಮುಂಚಿತವಾಗಿಯೇ ಕೊಡಗು ಕೌನ್ಸಿಲಿನಲ್ಲಿ ಇಲ್ಲಿಯ ಪ್ರತಿನಿಧಿಯು ಚುನಾವಣೆ ನಡೆದು ಹೋಯಿತು. ಕೊಡಗು ಕಾಂಗ್ರೆಸು ಸಂಸ್ಥೆಯಲ್ಲೂ, ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲೂ ಕೊಡಗಿನ ಭವಿಷ್ಯತ್ತಿನ ವಿಚಾರದಲ್ಲಿ ಬಿನ್ನಾಭಿಪ್ರಾಯಗಳಿದ್ದವು. ಒಂದು ಪಕ್ಷದವರು ಕೊಡಗನ್ನು ಪ್ರತ್ಯೇಕವಾಗಿಯೇ ಇಟ್ಟುಕೊಂಡು ಜವಾಬ್ದಾರಿ ಸರಕಾರ ಪಡೆಯಬೇಕೆಂದೂ ಇನ್ನೊಂದು ಪಕ್ಷದವರು ಕೊಡಗನ್ನು ನೆರೆಯ ಮೈಸೂರು ಪ್ರಾಂತಕ್ಕೆ ಅಥವಾ ಕರ್ನಾಟಕ ಪ್ರಾಂತಕ್ಕೆ ಸಂಯೋಜಿಸಬೇಕೆಂದೂ ವಾದಿಸುತ್ತಿದ್ದರು. ಶ್ರೀ ಪೂಣಚ್ಚನವರು ಸಂಯೋಜನಾ ಪಕ್ಷಕ್ಕೆ ಸೇರಿದವರಾಗಿದ್ದರು. ಕೊಡಗು ಜಿಲ್ಲಾ ಕಾಂಗ್ರೆಸು ಸಮಿತಿಯು ನೇಲಾಧಿಕಾರಿಗಳಾದ ಕರ್ನಾಟಕ ಪ್ರಾಂತೀಕ ಕಾಂಗ್ರೆಸುಸಮಿತಿಯವರು ಸಂಯೋಜನಾ ತತ್ವವನ್ನು ತುಂಬಾ ಪುಷ್ಟೀಕರಿಸುತ್ತಿದ್ದುದು ಮಾತ್ರವಲ್ಲದೆ ಅದನ್ನು ಕೊಡಗು ಕಾಂಗ್ರೆಸ್ಸಿನವರ ಮೇಲೆ ಒತ್ತಾಯ ಪಡಿಸಲು ಪ್ರಯತ್ನಿಸುತ್ತಿದ್ದರು. ರಾಜ್ಯಘಟನಾ ಸಭೆಗೆ ಕೊಡಗಿನ ಪ್ರತಿನಿಧಿಯನ್ನು ಆರಿಸುವ ಸಂದರ್ಭದಲ್ಲಿ ಕರ್ನಾಟಕ ಪ್ರಾಂತೀಕ ಕಾಂಗ್ರೆಸು ಕಮಿಟಿಯು ಅಧ್ಯಕ್ಷರನ್ನು ಕರೆಸಿಕೊಂಡು ಇವರ ಸಹಾಯದಿಂದ ಕೌನ್ಸಿಲಿನ ಸಂಯೋಜನಾ ಪಕ್ಷದವರು ತನುಗಿದ್ದ ಚಿಕ್ಕ ಬಹುಮತವನ್ನು ಉಪಯೋಗಿಸಿ ಪ್ರತ್ಯೇಕವಾದ ಪಕ್ಷದವರ ರಾಜಿಪ್ರಯತ್ನಗಳನ್ನು ಲೆಕ್ಕಿಸದೆ ಶ್ರೀ ಪೂಣಚ್ಚನವರನ್ನು ರಾಜ್ಯಘಟನಾ ಸಭೆಗೆ ಆರಿಸಿಕೊಂಡರು. ಆಗ್ಗೆ ಪ್ರತ್ಯೇಕವಾದಿಗಳು ಕೌನ್ಸಿಲಿನಲ್ಲಾದ ಈ ಚುನಾವಣೆಯಲ್ಲಿ ಭಾಗವನ್ನು ವಹಿಸಲಿಲ್ಲ. ಹಾಗೆ ಆರಿಸಲ್ಪಟ್ಟಾಗ ಶ್ರೀ ಪೂಣಚ್ಚನವರು ಕೊಡಗಿನ ಭವಿಷ್ಯತ್ತಿನ ವಿಚಾರವಾಗಿ ತನ್ನ ಸ್ವಂತ ಅಭಿಪ್ರಾಯವನ್ನು ರಾಜ್ಯಘಟನಾ ಸಭೆಯಲ್ಲಿ ಕೊಡುವುದಿಲ್ಲವೆಂದೂ ದೇಶದ

ವರ ಅಭಿಪ್ರಾಯ ತೆಗೆದು ಬಹುಮತದ ಅಭಿಪ್ರಾಯದಂತೆ ತಾನು ವರ್ತಿಸುವೆನೆಂದು ಕೌನ್ಸಿಲರ್ ಸಭೆಯಲ್ಲಿ ಭಾಷಣಮಾಡಿತ್ತರು. ರಾಜ್ಯಪುನರ್ ಸಭೆಯ ಕಾರ್ಯಕಲಾಪಗಳು ಮುಂದುವರಿಯುತ್ತಾ ಕೊಡಗಿನ ವಿಚಾರವಾಗಿ ಏನೊಂದು ತೀರ್ಮಾನಕ್ಕೆ ಬಾರದೆ ಇರುವ ಹೇಳಿಕೆಯಲ್ಲಿ ಶ್ರೀ ಪೂಣಚ್ಚನವರು ದೇಶದ ಅಭಿಪ್ರಾಯವನ್ನೇನು ತೆಗೆಯುವ ಪ್ರಯತ್ನವನ್ನು ಹೂಡಲೇ ಇಲ್ಲ. ಸಂಯೋಜನವಾದಿಯೂದ ಇವರ ಹರ್ತನೆಯಿಂದ ತೃಪ್ತರಾಗದ ಪ್ರತ್ಯೇಕ ಪಕ್ಷದವರು ದೇಶದಲ್ಲಿ ಕೊಡಗನ್ನು ಪ್ರತ್ಯೇಕ ಇಟ್ಟು ಸುಧಾರಣೆ ಕೊಡಬೇಕೆಂದು ಚಳವಳ ಪಡೆಸುತ್ತಾ ತಮ್ಮ ಪ್ರತಿನಿಧಿಗಳನ್ನು ದೆಲ್ಲಿಗೆ ಕಳುಹಿಸಿ ಸಮ್ಮಂದಪಟ್ಟ ಅಧಿಕಾರಿಗಳನ್ನು ಕಂಡು ತಮ್ಮ ಉದ್ದಿಶ್ಯವನ್ನು ನೆರವೇರಿಸಿಕೊಳ್ಳಲು ಪ್ರಯತ್ನ ಪಟ್ಟರು. ಆಗ್ಯೆ ರಾಜ್ಯಪುನರ್ ಸಭೆಯ ಅಧ್ಯಕ್ಷರು ಏಳು ಮೆಂಬರುಗಳಿಂದ ಕೂಡಿದ ಎಡ್‌ಹಾಕ್ ಸಮಿತಿಯೊಂದನ್ನು ಏರ್ಪಡಿಸಿ ಚೀಫ್ ಕಮಿಷನರ್ ಪ್ರಾಂತ್ಯಗಳಿಗೆ ಸುಧಾರಣಾಯೋಜನೆಯನ್ನು ಮಾಡಲು ನೇಮಿಸಿದರು. ಪ್ರತ್ಯೇಕ ಪಕ್ಷದ ಪ್ರತಿನಿಧಿಗಳು ಈ ಸಮಿತಿಯ ಸದಸ್ಯರನ್ನು ಭೇಟಿಮಾಡಿ ತಮ್ಮ ಉದ್ದಿಶ್ಯವನ್ನು ಅವರಲ್ಲಿ ಒತ್ತಿ ತಿಳಿಸಿದರು. ಈ ಸಮಿತಿಯವರು ಶ್ರೀ ಗುಪ್ತರವರು ಹೇಳಿದಂತೆ ಒಮ್ಮತದ ಶಿಫಾರಸ್ಸನ್ನು ಅಂದರೆ ಒಂದು ರೀತಿಯ ಜವಾಬ್ದಾರಿ ಸರಕಾರವನ್ನು ಕೊಡುವಂತೆ ಶಿಪಾರಸು ಮಾಡಿದ್ದು ನಿಜ. ಆದರೆ ಅಜಮಿರದ ಪ್ರತಿನಿಧಿ ಶ್ರೀ ಭಾರ್ಗವರು ಮತ್ತು ಶ್ರೀ ಪೂಣಚ್ಚನವರು ತಮ್ಮದೊಂದು ಹೆಚ್ಚಿನ ಟಪ್ಪಣಿಯೊಂದನ್ನು ಸೇರಿಸಿ ಅಜಮಿರ್ ಮತ್ತು ಕೊಡಗನ್ನು ನೆರೆಯ ಆಶ್ರಿತ ಸಂಸ್ಥಾನದೊಂದಿಗೆ ಸಂಯೋಜನೆ ಮಾಡುವ ಅನಿವನ್ನು ಘಟನೆಯಲ್ಲಿ ಕಲ್ಪಿಸಬೇಕೆಂದು ಸೂಚಿಸಿದ್ದರು. ಇದರಿಂದ ಇವರ ಉದ್ದಿಶ್ಯವು ಒಡೆದು ಕಾಣುತಿತ್ತು. ನಂತರ ಚೀಫ್ ಕಮಿಷನರ್ ಪ್ರಾಂತ್ಯಗಳಿಗೆ ಸುಧಾರಣೆ ಕೊಡಬೇಕೆಂಬ ಶ್ರೀ ಭಾರ್ಗವರವರ ಠರಾವನ್ನು ಪಾರ್ಲಿಮೆಂಟಿನಲ್ಲಿ ಚರ್ಚಿಸಿದಾಗ ಸಂಸ್ಥಾನಗಳ ಮಂತ್ರಿಯಾದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರವರು ಈ ಟಪ್ಪಣಿಯನ್ನು ಎತ್ತಿತೋರಿಸಿ ಆಗ್ಯೆ ಶ್ರೀ ಭಾರ್ಗವರವರು ಸಂಯೋಜನೆಯ ಸಮರ್ಥಕರಾಗಿದ್ದರೆಂದು ತೋರಿಸಿಕೊಟ್ಟರು. ಈ ಮಾತು ಶ್ರೀ ಪೂಣಚ್ಚನವರಿಗೂ ಸಲ್ಲುತ್ತದಲ್ಲವೇ?

ರಾಜ್ಯಪುನರ್ ಸಭೆಯು ಕಾರಣಾಂತರಗಳಿಂದ ಎಡ್‌ಹಾಕ್ ಸಮಿತಿಯ ಶಿಫಾರಸುಗಳನ್ನು ರಾಜ್ಯಪುನರ್ನಲ್ಲಿ ಸೇರಿಸದೆ ಈ ವಿಚಾರದ ತೀರ್ಮಾನವನ್ನು ಪಾರ್ಲಿಮೆಂಟ್ ಸಭೆಗೆ ಬಿಟ್ಟಿತು. ಇದರಿಂದ ಕೊಡಗಿನ ಜನರು ಅತೃಪ್ತಿಗೊಂಡು ಕೊಡಗಿಗೆ ಇತರ ಪ್ರಾಂತ್ಯಗಳಂತೆಯೇ ಸುಧಾರಣೆ ಕೊಡಬೇಕೆಂದು ಚಳವಳ ಹೂಡಿದರು. ಈ ಬಗ್ಯೆ ಪ್ರತ್ಯೇಕ ಪಕ್ಷದವರ ಪ್ರೇರೇಪಣೆಯಿಂದ ಸಾರ್ವಜನಿಕ ಸಭೆಗಳನ್ನು ನಡೆಸಿ ಠರಾವುಗಳನ್ನು ಪಾಸು ಮಾಡಿದುದಲ್ಲದೆ ಇಂಡಿಯಾ ಸರಕಾರ ಕ್ಕೆ ಮೆಮೋರಿಯಲ್‌ಗಳನ್ನು ಕಳುಹಿಸಿದರು. ಮತ್ತು ನಿಯೋಗೋಷ್ಠಿಗಳನ್ನು ಕೂಡ ದೆಲ್ಲಿಗೆ ಹೋಗುವಂತೆ ಮಾಡಿದರು. ಚೀಫ್‌ಕಮಿಷನರ್ ಪ್ರಾಂತಗಳ ಸ್ಥಿತಿಯು ಒಂದುಕ್ಕೊಂದು ಬೇರೆಯಾಗಿದೆ. ದೆಲ್ಲಿಯು ಕೇಂದ್ರ ಸರಕಾರದ ಮುಖ್ಯ ಪಟ್ಟಣವಾದ್ದರಿಂದ ಅದಕ್ಕೆ ಸಂಪೂರ್ಣ ಜವಾಬ್ದಾರಿ ಸರಕಾರ ಕೊಡಲು ಇಂಡಿಯಾಸರಕಾರವು ಹಿಂಜರಿಯುತಿತ್ತು. ಅಜಮಿರ್‌ದಲ್ಲಿ ಸರಕಾರದ ಉತ್ಪತ್ತಿಯು ಬಹು ಕಡಿಮೆಯಾಗಿ ಖರ್ಚಿಗೆ ಸಾಲದ್ದರಿಂದ ಅಲ್ಲಿಗೂ ಸುಧಾರಣೆಕೊಡಲು ಕಷ್ಟವಾಯಿತು. ಆದರೆ ಕೊಡಗಿನ್ನ ಸ್ಥಿತಿಯು ಇವೆರಡಕ್ಕಿಂತಲೂ ಉತ್ತಮವಾಗಿದ್ದು ಇಲ್ಲಿ ಉಳುವರಿ ಬಜೆಟ್ಟಿದ್ದು ಹಣ ಕಾಸಿನ ಮಟ್ಟಿಗೆ ಕೇಂದ್ರ ಸರಕಾರಕ್ಕೆ ಹೊರೆಯಾಗಿಲ್ಲದೆ ೨೫ ವರ್ಷಗಳಿಂದ ಲೆಜಿಸ್ಲೇಟಿವ್ ಕೌನ್ಸಿಲಿನ ಅನುಭವ ಪಡೆದು ಸುಧಾರಣೆ ಹೊಂದಲು ಯೋಗ್ಯವಾಗಿತ್ತು. ಶ್ರೀ. ಪೂಣಚ್ಚನವರು ಈ ವಿಚಾರವನ್ನು ರಾಜ್ಯಪುನರ್ ಸಭೆಯ ಮುಂದಿಟ್ಟು ಸಮ್ಮಂಧಪಟ್ಟ ಅಧಿಕಾರಿಗಳಿಗೆ ಮುಂದಟ್ಟುಮಾಡಿದ್ದೇ ಆದರೆ ಕೊಡಗಿಗೆ ಆಗಲೇ ಮಂತ್ರಿ ಮಂಡಳಿಯು ದೊರೆಯುತ್ತಿತ್ತೆಂದು ಕೊಡಗಿನ ಜನರಿಗೆ ತೋರಿತು. ಇದು ಅಲ್ಲದೆ ಒಂದೆರಡು ಸಾರಿ ಚೀಫ್ ಕಮಿಷನರ್ ಪ್ರಾಂತ್ಯಗಳ ವಿಚಾರ ಪಾರ್ಲಿಮೆಂಟ್ ಸಭೆಯಲ್ಲಿ ಚರ್ಚೆ ನಡೆದಾಗ ಶ್ರೀ. ಪೂಣಚ್ಚನವರು ತಾಟಿಂಗಿನಲ್ಲಿ ಗೈರಾಜರಾಗಿದ್ದರೆಂದು ತಿಳಿಯಬಹುದು. ಇಂತಹ ಸಮಯದಲ್ಲಿ ಕೊಡಗಿನ ವಿಚಾರ ಪಾರ್ಲಿಮೆಂಟ್ ಸಭೆಯಲ್ಲಿ ಒತ್ತಿ ಹೇಳುವುದರ ಬದಲು ಇವರು ಟೀ ಕಮಿಟಿಯು ವಿಟಂಗಿಗೆ ಕಲ್ಕತ್ತೆಗೆ ಹೋಗಿದ್ದರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಇದೆಲ್ಲ ನೋಡಿದ ಕೊಡಗಿನ ಜನರು ಇವರು ಕೊಡಗಿನ ನಿಜವಾದ ಪ್ರತಿನಿಧಿಯಲ್ಲವೆಂದು ಸಾರ್ವಜನಿಕ ವಿಟಂಗಗಳನ್ನು ನಡೆಸಿ ಠರಾವುಗಳನ್ನು ಮಾಡಿ ಪಾರ್ಲಿಮೆಂಟು ಸಭೆಗೂ, ಇಂಡಿಯಾ ಸರಕಾರಕ್ಕೂ ತಿಳಿಸುತ್ತಾ ಬಂದರು. ಇತ್ತರಲ್ಲಿ ಈ ವರ್ಷದ ಪ್ರಾರಂಭದಲ್ಲಿ ಅಂದರೆ ಫೆಬ್ರವರಿಯಲ್ಲಿ 'ಸಿ' ಭಾಗ ಸಂಸ್ಥಾನಗಳ 'ಕನ್‌ಹೆನ್‌ಷನ್'ನು ಶ್ರೀ. ಗುಪ್ತರವರ ಮುಂದಾಳುತನದಲ್ಲಿ ದೆಲ್ಲಿಯಲ್ಲಿ ಕಡೆಸಲ್ಪಟ್ಟಿತ್ತು. ಚೀಫ್ ಕಮಿಷನರ್ ಪ್ರಾಂತ್ಯಗಳ ಸಂಯೋಜನೆ ಮಾತನ್ನು ಬಿಟ್ಟು ಸಂಪೂರ್ಣ ಜವಾಬ್ದಾರಿ ಸರಕಾರ ಕೊಡಬೇಕೆಂಬ ಠರಾವನ್ನು ಚರ್ಚಿಸಿದಾಗ್ಯೆ ಶ್ರೀ ಪೂಣಚ್ಚನವರು ಕೊಡಗಿನಲ್ಲಿ ಈಗಿರುವ ಕೌನ್ಸಿಲು ಮತ್ತು ಸರಕಾರವನ್ನು ಖಂಡಿಸಿ ಮಾತಾಡಿ ಈ ತರದ ಸುಧಾರಣೆಯನ್ನು ಬೇರೆ ಪ್ರಾಂತ್ಯದವರು ಕೇಳಬೇಡಿರಿ ಎಂದು ಅವರು ಹೇಳಿದ್ದಲ್ಲದೆ ಕೊಡಗಿನ ಉತ್ತಮ ಆರ್ಥಿಕ ಸ್ಥಿತಿ ಮತ್ತು ಇಲ್ಲಿಯ ಜನರಿಗಿರುವ ಕೌನ್ಸಿಲಿನ ಅನುಭವ ಮೊದಲಾದ ಕೊಡಗಿನ ಸುಧಾರಣೆಗಿರುವ ಹೆಚ್ಚಿನ ಯೋಗ್ಯತೆಯನ್ನು ಎತ್ತಿ ಮಾತಾಡಲಿಲ್ಲವೆಂಬುದು ಅವರ ಭಾಷಣವನ್ನು ಈ ಪತ್ರಿಕೆಯಲ್ಲಿ ಓದಿದವರಿಗೆ ಗೊತ್ತಾಗಿದೆ. ಈ ವಿಚಾರ ಅಲ್ಲಿ ಒತ್ತಿ ಸ್ಪಷ್ಟವಾಗಿ ಹೇಳಿದ್ದಾದರೂ ಪ್ರತ್ಯೇಕವಾದಿಗಳ ಪ್ರತಿನಿಧಿಗಳು-

ಈ ಕನ್‌ವೆನ್‌ಷನ್ನಿನ ತೀರ್ಮಾನದಂತೆಯೇ ಶ್ರೀ ಭಾರ್ಗವರವರ ಠರಾವು ಪಾರ್ಲಿಮೆಂಟಿನ ಬಜೆಟ್ ವಿಟಂಗಿನಲ್ಲಿ ಚರ್ಚೆಗೆ ಬಂತು. ಈ ಸಮ್ಮಂಧ ಶ್ರೀ ಗುಪ್ತರವರು ಪ್ರಶ್ನಿಸಿರುವಂತೆ 'ಕೊಡಗು' ಪತ್ರಿಕೆಯ ಸಂಪಾದಕರು ಪಾರ್ಲಿಮೆಂಟು ಮೆಂಬರುಗಳ 'ಸ್ಟಾನ್ ಆಫಿಷಿಯಲ್' ಠರಾವುಗಳ ಜಿದನೆಯ ಪಟ್ಟಿಯನ್ನು ನೋಡಿರುವರು; ಮಾತ್ರವಲ್ಲದೆ ಈ ಸಮ್ಮಂಡ ಮೆಂಬರುಗಳು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣವನ್ನು ಕೇಳಿಯೇ ಪಾರ್ಲಿಮೆಂಟ್ ಸಭೆಯಲ್ಲಿ ಹಾಜರಿದ್ದ ಮಂತ್ರಿ ಶ್ರೀ ಗಾಡ್ಗಿಲ್‌ರವರು ಗೃಹಮಂತ್ರಿಯು ಪಕ್ಷವಾಗಿ ಉತ್ತರವೀಯುತ್ತಾ– 'ಶ್ರೀ ಪೂಣಚ್ಚನವರ ಭಾಷಣವನ್ನು ಕೇಳಿ ಕೊಡಗನ್ನು ಕೂಡಲೇ ಮೈಸೂರು ಯೂ ಮಡ್ರಾಸಿಗೆ ಸಂಯೋಜಿಸಬೇಕೆಂದು ಅವರು ಹೇಳಿಲ್ಲ ಹಲವರಿಗೆ ಮುಂದಟ್ಟು ಮಾಡಿದ್ದಾರೆಂದು ನನಗನ್ನಿಸುತ್ತದೆ' ಎಂಬುದಾಗಿ ಹೇಳಿದರು! ಈ ಸ್ಪಷ್ಟವಾದ ಹೇಳಿಕೆಯ ನಂತರ ಶ್ರೀ ಪೂಣಚ್ಚನವರು ತಾನು ಸಂಯೋಜನೆಯ ವಿಚಾರ ಪ್ರಯತ್ನಿಸಲಿಲ್ಲವೆಂದರೆ ಇಲ್ಲಿಯ ಜನರು ಹೇಗೆ ನಂಬುವರು? ಅದೂ ಅಲ್ಲದೆ ೧೯೪೯ನೇ ಇಸವಿ ನವೆಂಬರ್ ತಿಂಗಳಲ್ಲಿ ಗೃಹ ಮಂತ್ರಿಯರಾಗಿದ್ದ ಸರ್‌ದಾರ್ ಪಟೇಲರವರು ಕೊಡಗಿನ ಪ್ರತಿನಿಧಿಗಳನ್ನು ದೆಲ್ಲಿಗೆ ಕರೆಸಿಕೊಂಡು ಶ್ರೀ ಮೆನನ್‌ರವರ ಅಧ್ಯಕ್ಷತೆಯಲ್ಲಿ ಚರ್ಚಿಸಿದ್ದಾಗ್ಯೆ ಶ್ರೀ ಪೂಣಚ್ಚನವರು ಸಂಯೋಜನಾ ಪಕ್ಷದ ಮುಂದಾಳಾಗಿ ಚಿಕ್ಕ ಪ್ರಾಂತ್ಯವಾದ ಕೊಡಗಿನ ಆದಾಯವು ಬಹು ಕಡಿಮೆಯಾಗಿಹೆ ಎಂದೂ ಅದಕ್ಕೆ ತನ್ನ ಕಾಲಮೇಲೆ ನಿಲ್ಲಲು ಸಾಧ್ಯವಿಲ್ಲವೆಂದೂ ಇದನ್ನು ಬೇರೆ ಪ್ರಾಂತ್ಯಗಳೊಡನೆ ಸಂಯೋಜನೆ ಮಾಡಲೇ ಬೇಕಾಗುವುದೆಂದೂ ಹೇಳಿದ ಮಾತುಗಳನ್ನು ಕೊಡಗಿನ ಜನರು ಮರೆಯಲಾರರು. ಇದರೊಂದಿಗೆ ಜೂನ್ ತಿಂಗಳಲ್ಲಿ ಪಾರ್ಲಿಮೆಂಟಿನ ಬಜೆಟ್ ವಿಟಂಗು ಮುಗಿದ ಕೂಡಲೇ ಚೀಫ್ ಕಮಿಷನರ್ ಪ್ರಾಂತ್ಯಗಳ ಪ್ರತಿನಿಧಿಗಳು ಡಾ. ಪಟ್ಟಾಭಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಭೋಪಾಲ್, ಅಜಮಿರ ಮತ್ತು ಕೊಡಗನ್ನು ಕೂಡಲೇ ದೊಡ್ಡ ಪ್ರಾಂತ್ಯಗಳೊಡನೆ ಸಂಯೋಜನೆ ಮಾಡಿ ಬಿಡಬೇಕೆಂದು ಒಮ್ಮತದಿಂದ ತೀರ್ಮಾನಿಸಿ ಇಂಡಿಯಾ ಸರಕಾರಕ್ಕೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೂ ಈ ತೀರ್ಮಾನವನ್ನು ಕಳಿಸಿದ್ದು ಇಲ್ಲಿಯ ಜನರಿಗೆ ಪತ್ರಿಕೆಗಳ ಮೂಲಕ ಗೊತ್ತಾಗಿದೆ. ಈ ರೀತಿ ಪೂಣಚ್ಚನವರು ತಾನು ಮೊದಲು ಕೊಟ್ಟದ್ದ ಭರವಸೆಯಂತೆ ಜನರ ಅಭಿಪ್ರಾಯವನ್ನು ತಿಳಿಯಲು ಯಾವುದೊಂದು ಪ್ರಯತ್ನ ಮಾಡದೆ ಸಂಯೋಜನೆಗೆ ಒಳಗಿಂದೊಳಗೆ ಮಾಡುತ್ತಿದ್ದ ಪ್ರಯತ್ನಗಳನ್ನು ಇಲ್ಲಿಯ ಜನರು ಅರಿತುಕೊಂಡೇ ಕೊಡಗಿನ ಭವಿಷ್ಯತ್ತಿಗೆ ಅಪಾಯ ಬರುವದೆಂಬ ಸಂದರ್ಭಗಳಲ್ಲಿ ಜನರು ಎಚ್ಚೆತ್ತು ಪ್ರತ್ಯೇಕ ಪಕ್ಷದ ಕೆಲಸಗಾರರ ಸಹಾಯದಿಂದ ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಬೇಕೆಂದು ಬಲವಾಗಿ ಚಳವಳವನ್ನು ನಡೆಸಿದಾಗಿದೆ.

ಶ್ರೀಗುಪ್ತರವರು ದೆಲ್ಲಿಯ ಸುಧಾರಣೆಗಾಗಿ ಬಹುವಾಗಿ ಪ್ರಯತ್ನಿಸಿರುವರೆಂಬುದು ಇಲ್ಲಿಯ ಜನರಿಗೆ ಗೊತ್ತಾಗಿದೆ. ಇವರ ಶ್ರಮದ ಹತ್ತರಲ್ಲಿ ಒಂದು ಭಾಗದಷ್ಟು ಶ್ರೀ ಪೂಣಚ್ಚನವರು ಮಾಡಿದ್ದರೆ ಕೊಡಗಿಗೆ ರಾಜ್ಯಪುನರ್ ಸಭೆಯಲ್ಲಿ ಎಂದೋ ಸುಧಾರಣೆ ದೊರೆತು ಹೋಗುತಿತ್ತು. ಶ್ರೀ ಗುಪ್ತರವರು ಕೊಡಗು ಸಂಪಾದಕರೊಂದಿಗೆ ದೆಲ್ಲಿಯೆಲ್ಲಿ ಪೂಣಚ್ಚನವರ ವಿಚಾರ ಮಾತಾಡಿದಾಗ್ಯೆ ಅವರು ಸಂಯೋಜನಾವಾದಿಗಳಾದ ಕಾರಣ ಕೊಡಗಿನ ಸುಧಾರಣೆಗೆ ಹೆಚ್ಚಿನ ಪ್ರಯತ್ನ ಮಾಡಲಾರರೆಂದೂ ಆದ್ದರಿಂದಲೇ ತಾನು ಆಗಿಂದಾಗ್ಯೆ ದೆಲ್ಲಿಗೆ ಬಂದು ಸಮ್ಮಂಧಪಟ್ಟ ಅಧಿಕಾರಿಗಳ ಮತ್ತು ಸಮ್ಮಂಧವರ ಸಹಾಯವನ್ನು ಕೋರುತ್ತಿರುವದಾಗಿಹೆಯೆಂದೂ ಹೇಳಿದ್ದನ್ನು ಶ್ರೀ ಗುಪ್ತರವರು ಮನತೆರೆದಲಿಸ್ಕಿಲ್ಲವಾಗಿ ನಂಬಲಾಗಿದೆ ಹೇಗೂ ಕೊಡಗಿನ ಜನರ ಅಭಿಪ್ರಾಯ ಮತ್ತು ಇಲ್ಲಿಯ ರಾಜಕೀಯ ಚಳವಳದ ಹೆಚ್ಚಿನವೂಹಿತಿ ಇಲ್ಲದ ಶ್ರೀಗುಪ್ತರವರು ಕೊಡಗಿನ ಸಂಪಾದಕರ ಕರ್ತವ್ಯದ ವಿಚಾರ ಬೋಧನೆಯನ್ನು ಕೊಡುವ ಅವಶ್ಯಕತೆಯಿಲ್ಲ. ಪಾರ್ಲಿಮೆಂಟಿನಲ್ಲಿ ಕೊಡಗಿನ ಪ್ರತಿನಿಧಿಯೂದ ಶ್ರೀ ಪೂಣಚ್ಚನವರು ಅಲ್ಲಿ ಮಾಡಿದ ಕೆಲಸಗಳನ್ನು ತಾನು ಪ್ರತಿನಿಧಿಸುವ ಜನರಿಗೆಲಾಗಾಗ್ಯೆ ತಿಳಿಸಬೇಕಾದ್ದು ಅವರ ಕರ್ತವ್ಯವಾಗಿತ್ತು. ಅದರ ಬದಲು ಇಂದು ಅವರು ಶ್ರೀ ಗುಪ್ತರವರ ಸರ್ವೇಕ್ಷಣೆಯನ್ನು ಜನರ ಮುಂದಿಡುವಂಥಾ ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳಬೇಕಿತ್ತೆ?

— ಸಂಪಾದಕ

ನೂರಾಟಕ್ಕಿದೆ.

ಸೋಮವಾರಪೇಟೆನಾಡು ಕಾಜೂರು ಗ್ರಾಮದಲ್ಲಿ, ಸರ್ಕಾರಿ ರಸ್ತೆಗೆ ೬ ಫರ್ಲಾಂಗು ದೂರದಲ್ಲಿರುವ, ಫಸಲು ಜೀನ್ನಾಗಿ ಬಿಡುತ್ತಿರುವ ಈ ವರ್ಷ ೮ ಖಂಡಿ ಕಾಫಿ ಅಂದಾಜು ಇರುವ ಉತ್ತಮ ದರ್ಜೆಯ ಕಾಫಿ ತೋಟ ೮ ಏಕ್ರೆ, ಉತ್ತಮ ಸ್ಥಿತಿಯಲ್ಲಿರುವ ೭ ಏಕ್ರೆ ಹೊಸ ಕಾಫಿ ತೋಟ ಹುಮ್ಮ ೧೫ ಏಕ್ರೆ ಕಾಫಿ ತೋಟ ಒಳ್ಳೆಯ ನೀರಾವರಿ ೧೫ ಏಕ್ರೆ ಭೂಮಿ (ಸಾಗಾಗುತ್ತಿದೆ) ೧೫೦೦ ಕಿತ್ತಳೆ ಮರಗಳೂ ೫ ವರ್ಷ ಪ್ರಾಯದ ೫೦೦ ಕಿತ್ತಳೆ ಗಿಡಗಳೂ ಸೇರಿ ವರ್ಷಕ್ಕೆ ರೂ. ೨೫ಸಾವಿರ ಗುತ್ತಿಗೆ ಬರುವ ಕಿತ್ತಳೆ ತೋಟ, ವರ್ಷಕ್ಕೆ ೧೫ ಮಣ ಫಸಲು ಬರುವ ಅಂದಾಜು ೬೦೦ ಮೆಣಸಿನ ಹಂಬು, ಹುಲ್ಲುಗಾವಲು ೫ ಏಕ್ರೆ ನೂರಾಟಕ್ಕಿದೆ. ಸಮೀಪ ಸರ್ಕಾರಿ ಪೈಸಾರಿ ಜಾಗ ತಂಬಾ ಇದೆ. ಮಡಿಕೇರಿ ಸೋಮವಾರಪೇಟೆ ರಸ್ತೆ ೨೦ನೇ ಮೈಲಿನ ಸಮೀಪ ಹಾರಂಗಿ ರಸ್ತೆಯಲ್ಲಿ ಆಸ್ತಿ ಇದೆ. ಕೊಳ್ಳುವ ಇರಾದೆ ಇರುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು. ಕ್ರಯ ರೂ. ೬೮,೦೦೦/-. ವರ್ಷಕ್ಕೆ ೧೪,೦೦೦ ರೂಪಾಯಿ ಉತ್ಪತ್ತಿಯಾಗುವ ಆಸ್ತಿ.

ಎನ್. ಕೆ. ಕೃಷ್ಣಮೂರ್ತಿ,
ಕಾಜೂರು, ಬೇಳೂರು ಪೋಸ್ಟ್,
ಉತ್ತರ ಕೊಡಗು.

ನಾಡಿನ ಬಿಕ್ಕಟ್ಟಿಗೆ ಕಾರಣರಾರು?

ಜನತೆಯು ಕೂಗನ್ನು ಸರಕಾರ ನಿರ್ಲಕ್ಷಿಸುವ ವರ್ತನೆಯನ್ನು ವರ್ಜಿಸಿ ಅವರ ಹಿತೈಷಿಗಳಾಗದಿದ್ದಲ್ಲಿ ಪರಿಸ್ಥಿತಿ ಪರಮಾವಧಿಗೇರದಿದ್ದೀತೆ? ಅವರಿಗೊದಗಿದ ವಿಪತ್ತನ್ನು ಸಹಿಸಲಾರದೆ ಅವರು ಮೊರೆಯಿಡುವುದಾಗಿ ಸರಕಾರವು ಮನಗಂಡರೆ ಹಿತವಾದೀತು. ಉದರಬಾಧೆಯ ನೋವನ್ನುಂಡವರು ಅಳುವುದಲ್ಲದೆ ವಿಲಾಸ ವೈಭವದಲ್ಲಿ ತಲ್ಲೀನರಾದವರಿಗೆ ನೋವೆಂದರೇನೆಂಬ ಅನುಭವ ಹೇಗೆ ಬಂದೀತು? ಸ್ವಾರ್ಥರಹಿತ ಕರ್ಮಯೋಗಿ ನಾಡಿನ ಬಿರುದಾಂಕಿತ 'ನೇಗಿಲಯೋಗಿ' ನಿರಶನದಿಂದ ನಿತ್ರಾಣಿಯೂಗಿಹ್ದಾನೆಂದಾಗ ನೀರೂರುವುದು ಕಣ್ಣಲ್ಲಿ!

ಮೊನ್ನೆ ಭಾಗಮಂಡ್ಲದಲ್ಲಿ ಓದುಗರ ಓಲೆಯಲ್ಲಿ ಆಚ್ಚಾದ ಸುದ್ದಿಯನ್ನು ನೋಡಿ ಜನರು ಹರ್ಷದಿಂದ ಪತ್ರಿಕೆಯನ್ನು ಓದುವವರು ಓದಿದರು; ಓದಿದ್ದನ್ನು ಕೇಳಿದರು ಕೆಲವರು. ಪಾತಾಪರಣ ಸೋಮವಾರ ಬದಲಾಯಿಸಿತು. ಸತ್ಯ ಸಂಶೋಧನೆಯು ಪರಿಶೀಲನೆಯೂಯಿತು. ಜವಳಿ ಅಂಗಡಿಯಲ್ಲಿ ಕಳ್ಳಪೇಟೆ ಮಾರಾಟಕ್ಕಾಗಿ ಶೇಕರಿಸಿಟ್ಟ ತಾನುಗಟ್ಲಿ ಬಟ್ಟೆ ನಿಯಂತ್ರಣ ಅಧಿಕಾರಿಗಳ ಪತ್ತೆಗೆ ಸಿಕ್ಕಿ ಬಿತ್ತು ನಾಲ್ವತ್ತ ನಾಲ್ಕನೆಯ ಇಸವಿಯಿಂಸಲೇ ಉತ್ತತ್ತೋತ್ತರು ಆತೀ ಅಗ್ಗದ, ಸಾಮಾನ್ಯ ಜನತೆಗೆ ಹಿತವಾಗಿರುವ ಸುಮಾರು ಸಹಸ್ರ ರೂಪಾಯಿ ಬೆಲೆ ಬಾಳುವ ಬಟ್ಟೆಯನ್ನು ದಾಸ್ತಾನು ಮಾಡಿದವರು ತಮ್ಮ ಕತ್ತಲೆಕೋಣೆಯಲ್ಲಿ ಓರಣವಾಗಿಟ್ಟಿದ್ದರು. ಸಾಡೇತೀನ್ ಅಂಗಡಿಗಳಿಂದಿರುವ ಇಲ್ಲಿ ಕೋಟಾಬಟ್ಟೆ ಬಂದ ಮರುದಿನವೇ ಅದೃಶ್ಯವಾಗುತಿದ್ದದು ಈಗ ಸರಕಾರಕ್ಕೂ ಸಮಸ್ತ ಸಾರ್ವಜನಿಕರಿಗೂ ತಿಳಿಯಿತು. ನಲ್ವತ್ತ ನಾಲ್ಕರಿಂದ ಶೇಕರಿಸಲು ತೊಡಗಿದ ಈ ಕಪ್ಪು ಸಂತೆಯ ಧುರೀಣರು ಇಲ್ಲಿಯ ಬಡ ಜನತೆಗೆ ಆರೇಳು ವರ್ಷದಿಂದ ಬಟ್ಟೆಯು ಸರಬರಾಯಿ ಎಷ್ಟರ ತನಕ ಮಾಡಿರಬಹುದೆಂದು ಯೋಚಿಸಬೇಕಾಗಿದೆ. ಈಗ ಪತ್ತೆಗೆ ಬಿದ್ದ ಕಳ್ಳಪೇಟೆ ಕೋರರನ್ನು ಮಾಡರಿಯೂಗಿ ದೇಶಾದಾದ್ಯಂತ ಪ್ರಚುರಪಡಿಸಿ ಕಠಿಣವಾದ ಪ್ರಾಯಶ್ಚಿತ್ತವನ್ನು ಸರಕಾರವು ಕೈಗೊಳ್ಳುವುದೇ ಎಂದು ನೋಡಬೇಕಾಗಿದೆ. ಸರಕಾರವು ಸಾರ್ವಜನಿಕರ ಸಹಾಯವನ್ನು ಪಡೆದು ನಿಯಂತ್ರಣ ಸಾಮಗ್ರಿಗಳ ಮೇಲೆ ಅಧಿಕ ಹಣವನ್ನು ಕಪ್ಪು ಸಂತೆಯ ಮೂಲಕ ಗಳಿಸುವವರನ್ನು ನಿರ್ಬಂಧಿಸಲು ಹೊರಡಿಸಿದ ಪ್ರಕಟಣೆಯಿಂದಲೇ ಸಂತೃಪ್ತರಾಗುವರೋ ಯೂ ಸರಿಯೂದ ಕಾರ್ಯೂಚರಣೆಯನ್ನು ಕೈಗೊಳ್ಳುವರೋ ಎಂಬುದನ್ನು ಕುತೂಹಲದಿಂದ ನಿರೀಕ್ಷಿಸಬೇಕಾಗಿದೆ.

ಮೊದಲನೆಯದಾಗಿ ಪರರ ತಪ್ಪನ್ನು ತಿಳಿಯಲೆತ್ನಿಸದ, ಅಧಿಕಾರಿಗಳು ತಮ್ಮ ಲೋಪದೋಷಗಳನ್ನು ತೊಡೆದುಹಾಕಿ ಆದರ್ಶಗಳಾಗುವುದು ಪ್ರಾಮುಖ್ಯವಾಗಿದೆ. ಲಂಚಗುಳಿತನ, ಸ್ವಾರ್ಥತೆ, ದರ್ಪ ಮೊದಲಾದುವುಗಳನ್ನು ನಿಶೇಧಿಸಿ ಸರ್ವಾ

ಓದುಗರ ಓಲೆಗಳು

ರ್ಗದಲ್ಲಿ ಸ್ಥಿತಿಯುವ ರೀತಿ ನೀತಿಗಳನ್ನು ನಿಸ್ವಾರ್ಥಿ ಅನಾಗರೀಕ ನಾಡಿನವರಲ್ಲಿ ನಿವೇದಿಸಲನರ್ಗುಣವಾಗದೇಕು.

"ಬಬುಕ್ಷಿತ: ಕಿಂ ನ ಕರೋತಿ ಪಾಪಂ" ಎಂದರೆ ಅನ್ನವಿಲ್ಲದವನು ಯಾವ ಪಾಪ ಕೃತ್ಯಕ್ಕೂ ಹಿಂಜರಿಯುವುದಿಲ್ಲ. ಅವನ ಉದರಾಗ್ನಿಯು ಉಂಗೆ ಪ್ರಪಂಚದ ಯಾವ ಚಲನವಲನವು ಅಗೋಚರವಾಗಿಯೇ ಕಂಡು ತನ್ನ ಚಾಥೆಯನ್ನು ಶಮನ ಪಡಿಸಲು ಏಕ ದೃಷ್ಟಿ ಹೂಶ್ರಗೋಚರಿಸುವುದು. ಅಧಿಕಾರಿ ವ್ಯಂದ ಮೆತ್ತು ಶ್ರೀಮಂತರು ತಮ್ಮ ಕಲ್ಮಶಕೊಳೆಯನ್ನು ಮೊದಲಾಗಿ ತೊಳೆಯಲಿ. ಅನಂತರ ಎಲ್ಲವೂ ಸುಗಮವಾಗುವುದು.

ಮೊನ್ನೆ ಸಿಕ್ಕಿಬಿದ್ದ ಕಳ್ಳಪೇಟೆಯ ಬಟ್ಟೆಯನ್ನು ನಿಯಂತ್ರಣ ಅಧಿಕಾರಿಗಳು ಸಮ್ಮುಖದಲ್ಲಿಯೇ ಹಿಕ್ಕಾಯಿಸಿದರು. ಪೇಟೆಯನಿವಾಸಿಗಳಿಗೆ ಕೆಲವರಿಗೆ ಹೊರಲಾರದ ಷ್ಟು ಸಿಕ್ಕಿತು. ಸುದ್ದಿಯನ್ನು ಕೇಳಿ ಧಾವಿಸಿ ಬಂದ ನಾಡಿಗರಿಗೆ ಶೂನ್ಯ! ಈ ರೀತಿಯು ಅಧಿಕಾರ ಸಲ್ಲದು.

ಅಧಿಕಾರಿಗಳು ಟೊಂಕಕಟ್ಟಿ ಇಂದಿನಿಂದಲೇ ಹೊರಟಲ್ಲಿ ಕಪ್ಪು ಸಂತೆಯನ್ನು ಕಿತ್ತೊಗೆಯುವುದು ಪ್ರಯೂಸವಾಗಲಾರದು. ಮಡಿಕೇರಿ, ವೀರಾಜಪೇಟೆಯಲ್ಲಿ ಕೊಡಗಿಗೆ ಎರಡು ಮೂರು ವರ್ಷಕ್ಕೆ ಸಾಕಾಗುವಷ್ಟು ಬಟ್ಟೆಯು ಕಪ್ಪು ಸಂತೆಗಾಗಿ ಖರ್ಚಿಟ್ಟದ್ದನ್ನು ಧೈರ್ಯವಾಗಿ ಶೋಧಿಸಬಹುದು. ಮಡಿಕೇರಿಯ ಅಧಿಕಾರಿಗಳ ಐಶ್ವರ್ಯವಂತರ ಮನೆಯ ತಪಾಸಣೆಯನ್ನು ನಡೆಸಿದರೆ ಗಾಡಿಗಟ್ಲೆ ಬತ್ತ ದೊರಕಬಹುದಲ್ಲವೆ? ರೇಷನ್ ಅಧಿಕಾರಿಗಳು 'ಪ್ರೋಕ್ಯೂರ್ ಮೆಂಟ್' ಸಾರಿತೋಷಕವನ್ನು ಪಡೆಯಲು ಕ್ರೂರ ಮನೋಭಾವನೆಯಿಂದ ವರ್ತಿಸಿ ನಾಡಿನ ಜನತೆಯ ಇಂದಿನ ದುಸ್ಥಿತಿಗೆ ಕಾರಣರೂ. ಇವರು ನಾಡಿನಲ್ಲಿ ಉಳುವಕಿ ಭತ್ತವಿರುವ ಪ್ರತಿಯೊಬ್ಬರ ಮನೆಯನ್ನು ಪರಿಶೀಲಿಸದೆ ಅಲ್ಲಲ್ಲಿ ಅವರ 'ಕೈಬಿಸಿ' ಮಾಡಿದವರಲ್ಲಿಗೆ ಹೆಜ್ಜೆಯನ್ನಿಡಲಿಲ್ಲವೆಂದರೆ ನೊಂದವರು ತಮ್ಮ ವೇದನೆಯನ್ನು ಯಾರಲ್ಲಿ ನಿವೇದಿಸುವುದು? ತಮ್ಮ ಅಧಿಕಾರಿಗಳು ಲೋಕಹಿತ ಚಿಂತನೆಯನ್ನರಿತು ಸಮತಾ ದೃಷ್ಟಿಯಿಂದ ಅಧಿಕಾರವಶ್ಯನ್ನು ವಿನಿಯೋಗಿಸಬಾರದೇ?

'ಶ್ರೀನಿವಾಸ'

ಪ್ರಯೂಣಿಕರ ಸೌಕರ್ಯ.

ಸೋಮವಾರಪೇಟೆಯಿಂದ ಮಡಿಕೇರಿ ಕಡೆ ಹೋಗುವವರಿಗೆ ಎಲ್ಲಾ ಸೌಕರ್ಯಗಳಿವೆ. ಆದರೆ ಸೋಮವಾರಪೇಟೆಯಿಂದ ಉತ್ತರಕ್ಕೆ ಹೋಗುವವರಿಗೆ ಅಷ್ಟು ಸೌಕರ್ಯಗಳಿಲ್ಲ. ಇದಕ್ಕೆ ಸಂಬಂಧಪಟ್ಟ ಬಸ್ ಮಾಲೀಕರಲ್ಲೂ ಮತ್ತು ಉದ್ಯೋಗಸ್ಥರಲ್ಲೂ ಒಂದು ಕೋರಿಕೆ ಏನೆಂದರೆ—ಸೋಮವಾರಪೇಟೆಯಿಂದ ಉತ್ತರಕ್ಕೆ ವ್ಯಾಪಾರಸ್ಥರಿಗೂ ಉದ್ಯೋಗಸ್ಥರಿಗೂ ಮೊದಲು ಸಿಕ್ಕುವ ಬಸ್ಸು ಮಡಿಕೇರಿಯಿಂದ ಬಂದು ಮುಟ್ಟುವುದಕ್ಕೆ ಹೇಗಾಗುವಷ್ಟೂ ೧೦-೩೦ ಗಂಟೆಯಾದ್ದು! ಕೊಡ್ಲಿಪೇಟೆಯಿಂದ ಹಿಂದಕ್ಕೆ ಬರುವ ಕಡೇ ಬಸ್ಸು ಮಧ್ಯಾಹ್ನ ೧ ಗಂಟೆಗೆ. ಇಷ್ಟೊಂದು ಸಮಯದಲ್ಲಿ ಶನಿವಾರಸಂತೆ ಯೂ ಕೂಡ್ಲಿಪೇಟೆಯಲ್ಲಿ ಹೆಚ್ಚು ಕೆಲಸ ಮಾಡಲಾಗುವುದಿಲ್ಲ. ಇಲ್ಲವಾದರೆ ಇನ್ನೊಂದು ದಿವಸ ಉಳಿಯಬೇಕಾಗುವುದು—ಇದರಿಂದ ಹಣ ವ್ಯಯ—ಸಮಯ ಹಾಳು! ಅದುದರಿಂದ ದಯವಿಟ್ಟು ಸೋಮವಾರಪೇಟೆಯಿಂದ ಬೆಳಿಗ್ಗೆ ಏಳು ಗಂಟೆಗೆ ಹೋಗಿ ಸಾಯಂಕಾಲ ಏಳು ಗಂಟೆಗೆ ವಾಪಾಸು ಬರುವಂತೆ ಒಂದು ಲೈನು ಏರ್ಪಡಿಸಿದರೆ ಸಮಸ್ತ ಪಟ್ಟವರಿಗೆಲ್ಲಾ ಸೋಮವಾರಪೇಟೆಯವರು ಚಿರಋಣಿಯೂಗುವೆವು.

"ಸರಸ್ವತಿ"

ಮಲೇರಿಯೂ ಕಾಯಿಲೆ

ಕೊಡಗಿನಲ್ಲಿ ಈ ಕಾಯಿಲೆಯು ಕಮ್ಮಿಯೂಗಿದೆ. ಆದರೆ ನಾಪೋಕ್ಲ್ಲಿಯಲ್ಲಿ ಇದು ಕಮ್ಮಿಯೂದಂತೆ ತೋರುವುದಿಲ್ಲ. ಇಲ್ಲಿ ಒಬ್ಬ ಮಲೇರಿಯೂ ಮುಖ್ಯ ಅಧಿಕಾರಿಯವರು ತಾವು ಮಾಡಬೇಕಾದ ಕೆಲಸವನ್ನು ಬಿಟ್ಟು ಟೌನಿನಲ್ಲಿ ಕೆಲವು ಬೇಡದ ಕೆಲಸವನ್ನು ಮಾಡುತ್ತಿರುವರು! ಅವರು ಆ ವಿಷಯದಲ್ಲಿ ಗಮನ ತೆಗೆಯುವುದಿಲ್ಲವೆಂಬುದಕ್ಕೆ ಒಂದು ಕಾರಣ ಕೊಡುತ್ತೇನೆ. ಏನೆಂದರೆ ಅವರ ಮನೆಯ ಮುಂದುಗಡೆ ಒಂದು ಕೆಸರು ಗುಂಡಿ ಆದೆ. ಇದರಲ್ಲಿ ಹಲವಾರು ಹಂದಿಗಳು ಪ್ರತಿ ನಿತ್ಯ ಮಲಗಿರುವವು. ಮತ್ತು ಅಲ್ಲಿ ಲಕ್ಷಾಂತರ ಸೊಳ್ಳೆಗಳು ಹುಟ್ಟುತ್ತಿರುವವು. ಇದನ್ನು ಸರಿಪಡಿಸುವದು ಅವರ ಕರ್ತವ್ಯವಲ್ಲವೇ? ಕಣ್ಣೆದುರಿಗಿರುವ ಈ ವಿಚಾರವನ್ನೇ ನೋಡದವರು ಗ್ರಾಮಗಳಲ್ಲಿ ಏನು ಮಾಡಬಹುದು? ಇವರು ಇನ್ನು ಮುಂಡಕ್ಕಾದರೂ ತಮ್ಮ ಅಡ್ಡ ತಾಪತ್ರೆಯನ್ನು ಬದಿಗೊತ್ತುವಂತೆ ಭಗವಂತನು ಇವರಿಗೆ ಮನಸನ್ನು ಕೊಡಲಿ,

ಇವರಿಗೆ ಮೇಲಿನ ಅಧಿಕಾರಿಗಳ ಭಯವಿಲ್ಲ ಏಕೆಂದರೆ ನಾಪೋಕ್ಲಿನ ಸುತ್ತಲೂ ನದಿಗಳಿರುವುದರಿಂದ ಯಾರೂ ಬರಲಾರರು!

ರಾಜ.

ಗಾಡಿಗೆ ಆರು ರೂಪಾಯಿ ಹೆಚ್ಚಿಗೆ!

ಗಾಡಿಗೆ ೬ ರೂಪಾಯಿ ಇಂಡಿಯೂ ಸರ್ಕಾರದವರು ಹೆಚ್ಚಿಗೆ ಮಂಜೂರು ಮಾಡಿದ್ದಾರೆಂದು ಕೆಲವು ಮಂಡಿಯಾಳರ ಭಾಷಣಗಳಿಂದಲೂ ಪತ್ರಿಕೆಗಳಿಂದಲೂ ತಿಳಿದು ನಮ್ಮಂಥ ಬಡ ರೈತರು ಅಡನ್ನು ಸ್ವಲ್ಪ ದಿನಗಳ ಸಂತೆ ಖರ್ಚಿಗೆ ಉಪಯೋಗಿಸಬಹುದೋ ಎಂಬ ಆಶಯವಿಲ್ಲದ್ದಿವು ಆದರೆ ಈ ಹೆಚ್ಚಿಗೆ ಬಂಡ ರೂಪಾಯಿ ಯಾರಿಗೂ ದೊರೆತ ಸುದ್ದಿ ಕೇಳಿ ಬಂದಿಲ್ಲ. ಅದುದರಿಂದ ದಯವಿಟ್ಟು ಈ ರೂ. ೬ ಏನಾಯಿತ್ತೆಂಬುದನ್ನು ಸರಕಾರದವರು ಬಡ ರೈತರಿಗೆ ವಿವರವಾಗಿ ತಿಳಿಸಬೇಕಾಗಿ ಪ್ರಾರ್ಥನೆ.

ಬಡರೈತ.

ನಾಪೋಕ್ಲು ಶಾಲಾ ವಿದ್ಯಾರ್ಥಿ ವಸತಿಗೃಹ.

'ಕೊಡಗು' ಪತ್ರಿಕೆಯಲ್ಲಿ ನಾಪೋಕ್ಲು ಶಾಲಾ ವಿದ್ಯಾರ್ಥಿ ವಸತಿಗೃಹದ ಪಾರುಪತ್ಯೆಗಾರರ ಮೇಲೆ ಬರೆದ ಪತ್ರವನ್ನು ಓದಿದೆನು. ಇದನ್ನು ಯಾರು ಬರೆದರೊ ತಿಳಿಯದು. ಆದರೆ ಬರೆದದ್ದು ಸಾಧಾರಣ ಸತ್ಯವೆಂದೇ ಹೇಳಬೇಕಾಗಿದೆ. ಏಕೆಂದರೆ ಪಾಗಾರರ ಶಿಸ್ತು ಬಹಳ ಕಠಿಣ. ಇಷ್ಟೇ ಹೇಳಿಬಿಟ್ಟರೆ ಅವರು ಮಾಡುವ ಕೆಲಸ ಪೂರ್ತಿ ಹೇಳಿದಂತೆ ಆಗದುವುದಿಲ್ಲ.

ಅವರು ಮಾಡುವ ಕೆಲಸ ಬೇರೆ ಯಾರೂ ಮಾಡಲಿಕ್ಕಿಲ್ಲವೆಂದೇ ಹೇಳಬಹುದು. ವಾಡಿಕೆಯಾಗಿ ಬೋರ್ಡಿಂಗಿನಲ್ಲಿ ಯಾರೂ ಇರಲು ಒಪ್ಪುವುದಿಲ್ಲ. ಯಾಕೆಂದರೆ ಮಕ್ಕಳನ್ನು, ವಿದ್ಯಾರ್ಥಿಕಾರಿಗಳನ್ನು ತೃಪ್ತಿ ಪಡಿಸಲು ಸಾಧ್ಯವಾಗುವುದಿಲ್ಲ. ಆದರೆ ಇವರು ದಿನದ ೨೪ ಗಂಟೆಗಳೂ ಮಕ್ಕಳೊಡನೇ ಇದ್ದು ಪ್ರತಿಯೊಬ್ಬನು ಮಾಡುವ ತಪ್ಪನ್ನು ಕಂಡು ಹಿಡಿದು ತಿದ್ದಿ ಅವರ ತಂದೆ ತಾಯಂದಿರಿಗೆ ತಿಳಿಸಿ ಮಕ್ಕಳನ್ನು ಒಳ್ಳೆ ರೀತಿಗೆ ತರಲು ಪ್ರಯತ್ನಿಸುತ್ತಾರೆ. ಅಲ್ಲದೆ ಅವರು ಸಾಧಾರಣ ೧೫ ದಿನಗಳಿಗೊಮ್ಮೆ ಶಹ ಪಟ್ಣಕ್ಕೆ ಹೋಗದುವುದಿಲ್ಲ. ದಿನಪೂರ ಅಡಿಗೆಗೆ ಇರುವ ಸಾಮಾನುಗಳನ್ನುಕೊಳ್ಳುವುದು, ಅವುಗಳನ್ನು ಬೇಗ ಹಾಕಿ ಇಟ್ಟುಕೊಳ್ಳುವುದು ಆ ಸಮಯಕ್ಕೆ ಸರಿಯಾಗಿ ಅವುಗಳನ್ನು ಅಡಿಗೆಯವನಿಗೆ ಕೊಡುವುದು. ಹೆಚ್ಚು ಕಡಿಮೆಯಾಗದಂತೆ ನೋಡಿಕೊಳ್ಳುವುದು, ಮಕ್ಕಳ ಜೊತೆಯಲ್ಲೇ ಊಟಮಾಡುವುದು ಅವರು ಜೆಲ್ಲಿ ಹಾಳುಮಾಡದಂತೆ ನೋಡಿಕೊಳ್ಳುವುದು, ಅವರ ಜೊತೆಯಲ್ಲೇ ಓದುವುದು ಮಗೇರೆ ಕೆಲಸಗಳನ್ನು ಮಾಡುತ್ತಾರೆ. ಬೇರೆ ಕಡೆ ಪಾರುಪಾತ್ಯೆಗಾರರೂ ರೆಸಿಡೆಂಟ್ ಮಾಸ್ಟರು ಮಾಡುವ ಕೆಲಸಗಳಿಗಿಂತ ಹೆಚ್ಚು ಇವರು ಒಬ್ಬರು ಮಾಡುತ್ತಾರೆ. ಆದುದರಿಂದ ಆ ವಸತಿಗೃಹದಲ್ಲಿರುವ ಶಿಸ್ತು ಮತ್ತು ಕಡಿಮೆ ಖರ್ಚು ಬೇರೆ ಎಲ್ಲಿಯೂ ಇಲ್ಲವೆಂದು ಖಂಡಿತಾ ಹೇಳಬಹುದು.

ಇಷ್ಟೆಲ್ಲಾ ಕೆಲಸ ಮಾಡಿದರೂ ಸಹ ಅವರು ಕಾಸಿಗೆ ಪರಿಹಾರ ತೆಗೆದುಕೊಳ್ಳುವುದಿಲ್ಲ. ಹೀಗೆ ಯಾರು ಮಾಡಿಯಾರೆಂದು ಕೇಳಬೇಕಾಗಿದೆ. ಹಿಂದಿನ ಚಾತ್ಕಿ ಬರೆದವರು ಅದಕ್ಕೆ ಜವಾಬು ಕೊಡಬೇಕಾಗಿದೆ.

ಹೀಗೆ ಮಾಡಿದರೂ ಮಕ್ಕಳ ಪ್ರಯೋಜನಕ್ಕಲ್ಲದೆ ತನ್ನ ಸ್ವಾರ್ಥಕ್ಕಾಗಿ ಯಾರಾದರೂ ಮಾಡುತ್ತಾರೋ ಎಂಬುದನ್ನು ಯೋಚಿಸಬೇಕಾಗಿದೆ. ಎಲ್ಲಕ್ಷಿಯೂ ಏನಾದರೂ ತಪ್ಪುಗಳಿರಬಹುದು. ಆದರೆ ಅವರ ಒಳ್ಳೆ ವಿಷಯ ಏನೂ ಹೇಳದೆ ಬರೆ ತಪ್ಪನ್ನೇ ಎತ್ತಿ ಬರೆಯುವುದು ಎಂದೂ ಸರಿಯಲ್ಲ.

'ಅಭಿಮಾನಿ'

ನಾಪೋಕ್ಲಿಗೆ
'ಕೊಡಗು' ಪತ್ರಿಕೆಯ ಏಜೆಂಟರು
ಶ್ರೀ ಜೋಕರ ಮೊಣ್ಣಪ್ಪನವರು

ಕೊಡಗು

ತಾ. ೭-೯-೧೯೫೧ನೇ ಶುಕ್ರವಾರ

ಉಮೇದುವಾರರ ಆಯ್ಕೆ.

ಸಾರ್ವತ್ರಿಕ ಚುನಾವಣೆಯು ಬರಿಯ ಜನತೆಯ ತೀರ್ಮಗಳಲ್ಲಿ ನಡೆಯಬಹುದು. ಆ ಚುನಾವಣೆಗೆ ನಿಲ್ಲುವ ಉಮೇದುವಾರರು ತಮ್ಮ ನಾಮಪತ್ರಪತ್ರ ತವುಗೆ ಸಂಬಂಧಿಸಿದ ಪ್ರಾಂತೀಯ ಕಾಂಗ್ರೆಸ್ ಖಜೇರಿಗೆ ತಾ. ೧೫ ರೊಳಗೆ ಕಳುಹಿಸಬೇಕಾಗಿದೆ. ಪತ್ರಿಕೆಗಳನ್ನು ಓದುತ್ತಿರುವವರಿಗೆ ಕಾಂಗ್ರೆಸ್ ಟಿಕೇಟು ಯಾವ ರೀತಿ ಮೂರಾಟವಾಗುತ್ತಿದೆಯೆಂಬುದರ ಅರಿವಾಗಿರಬಹುದು. ಕಪ್ಪು ಸಂತೆಯ ವ್ಯಾಪಾರಿಯೊಬ್ಬರು ಕಾಂಗ್ರೆಸ್ ಚುನಾವಣಾ ನಿಧಿಗೆ ಇಪ್ಪತ್ತು ಲಕ್ಷ ಹಣ ಕೊಟ್ಟು ಪಾರ್ಲಿಮೆಂಟಿಗೆ ಕಾಂಗ್ರೆಸ್ಸಿನ ಹೆಸರಿನಲ್ಲಿ ನಿಲ್ಲುವ ಅನು ದೇಡಿರುವವನಂತೆ! ಬ್ರಿಟಿಷ್ ಕಾಲದ 'ರಿಫೀಹೋರ್ಮರ್' ಒಬ್ಬನು ಕಾಂಗ್ರೆಸ್ ನಿಧಿಗೆ ಒಂದು ಲಕ್ಷ ತೆತ್ತು ಪಾರ್ಲಿಮೆಂಟಿನ ಉಮೇದುವಾರಿಕೆ ಅಪೇಕ್ಷಿಸಿರುವನಂತೆ. ಈ 'ರಿಫೀ ಹೋರ್ಮರ್'ರ ಪುಗ ೫೦,೦೦೦ ತೆತ್ತು ಪ್ರಾಂತೀಯ ಶಾಸನ ಸಭೆಯ ಸ್ಥಳ ಕೇಳಿರುವನಂತೆ! ಈ ವಾರ್ತೆಗಳು ನಿಜವಾದರೆ ಕಾಂಗ್ರೆಸು ಯಾವ ರೀತಿ ಕೆಳಮಟ್ಟಕ್ಕಿಳಿದಿದೆಯೆಂಬುದನ್ನು ಬೇರೆ ಹೇಳಬೇಕಾ ಅವಶ್ಯಕತೆ ಇಲ್ಲ. ಈ ನೀತಿಯಲ್ಲಿ ಪ್ರಜಾಪ್ರಭುತ್ವತತ್ವವಿಲ್ಲ. ಇಲ್ಲಿ ತತ್ವಸಿದ್ಧಾಂತಗಳಿಗೆಡೆಯಿಲ್ಲ. ಈ ಬಂಡವಳ ನೀತಿಯಿಂದ ಕಾಂಗ್ರೆಸ್ ಟಿಕೇಟನ್ನು ಕೊಡುವ ಸಂಸ್ಥೆಯು, ಹಣಕ್ಕಾಗಿ ಕಾಂಗ್ರೆಸಿನಲ್ಲಿ ನಂಬಿಕೆ ಇರುವ ಸಾಧುಸಾಧ್ವಿಯರನ್ನು ಮೂಡುತ್ತಿದೆಯೆಂದರೆ ಅತ್ಯುಕ್ತಿಯಾಗದು. ಇಷ್ಟು ಕೊಡಗಿನ ಹೊರಹಿತ ಒಂದು ಉಪಾಹರಣೆಯಾದರೂ ಕಾಂಗ್ರೆಸ್ ಸಂಸ್ಥೆಯಲ್ಲಿ ದುಡ್ಡಿರುವವರಿಗೇ ಸ್ಥಾನವೆಂಬುದನ್ನು ಇಲ್ಲಿಯ ನೀತಿಯೂ ಸ್ಪಷ್ಟಪಡಿಸುತ್ತಿದೆ. ಕಾಂಗ್ರೆಸ್‌ವತಿಯಿಂದ ಪ್ರಾಂತೀಯ ಸಭೆಗೆ ಉಮೇದುವಾರರಾಗಲಿಚ್ಛಿಸುವವರು ಸೇವಾಶುಲ್ಕ ರೂಪದಲ್ಲಿ ರೂ. ೧೫೦|- ಶುಲ್ಕ ಹಾಗೂ ೨೦೦|- ಪ್ರಚಾರ ಧನ ಕೊಡಬೇಕೆಂದು ನಿಯಮ ಮಾಡಿರುವುದಾದರೂ ಪ್ರಜಾ ತತ್ವಕ್ಕೆ ವಿರುದ್ಧವಾದುದು! ಇಷ್ಟು ಹಣ ಕೊಡಲಾರದ ವ್ಯಕ್ತಿಯು ಅಹರ್ನಿಶೆ ಉತ್ಸವು ಕಾಂಗ್ರೆಸ್ಸಿಗನಾಗಿರಲೀ, ಎಷ್ಟೇ ಜನಹಿತ ಕೆಲಸಗಾರನಾಗಿರಲೀ ಆತನಿಗೆ ಕಾಂಗ್ರೆಸ್ ಉಮೇದುವಾರನಾಗುವ ಅರ್ಹತೆ ಇಲ್ಲವೆಂದಾಯಿತು. ಕಳ್ಳಸಂತೆ, ಚಾಳಿಬಡಕತನದಿಂದ ಧನಗಳಿಸಿದವರೂ, ಖಾದಿ ಟೊಪ್ಪಿಹಾಕಿ ಜನಸೇವಕರೆನ್ನುವವರೂ ಕಾಂಗ್ರೆಸ್ ಟಿಕೇಟು ಪಡೆಯಲು ಕಕ್ಕಾಬಿಕ್ಕಿಯಾಗುವರೇ ವಿನಾ ದುಡ್ಡಿಲ್ಲದ ನಿಸ್ವಾರ್ಥ ಸೇವಕರಲ್ಲ. ಇಂಥಾ ಜನರಿಂದ ರಚಿತವಾಗುವ ಶಾಸನ ಸಭೆಯಲ್ಲಿ ಯಾವ ಪ್ರಜಾಪ್ರಭುತ್ವ ತತ್ವ ಜಾರಿಯಲ್ಲಿ ಬಂದೀತು? ಅಂಥಾ ಹುಡ್ಡಿನ ತಳಹದಿಯಲ್ಲಿ ರಚಿತವಾದ ಸಭೆಯಿಂದ ಬಡ ರೈತನ ಹಿತವೇನಾದೀತು? ಕಾಂಗ್ರೆಸು ಬಂಡವಳ ದಾರರ ಸಂಸ್ಥೆಯೆಂಬ ಒಂದು ಹೊಸ ಹಲವೆಡೆಯಿಂದ ಕೇಳಿಬರುತ್ತಿದೆ. ಇಂದಿನ ಆದರ ಈ ನೀತಿಯು ಆ ಮಾತನ್ನು ಸಮರ್ಥಿಸುವಂತಿದೆ! ಏನೇ ಆದರೂ ಕಾಂಗ್ರೆಸು ನಿಜವಾದ ಜನಸೇವಕರನ್ನೂ, ಕಾಂಗ್ರೆಸ್ ತತ್ವದಲ್ಲಿ ವಿಶ್ವಾಸವಿರುವವರನ್ನೂ ಆರಿಸಿ ದೇಶದ ಹಿತವನ್ನು ಕಾಯಲಿ.

ದಿವಂಗತ ಪುಪ್ಪಣ್ಣನವರು.

ಕೊಡಗು ಪ್ರತ್ಯೇಕ ಪಕ್ಷದ ಮುಂ ಖಾಳುಗಳೂ, ಕೊಡಗು ಸಹಕಾರ ಬ್ಯಾಂಕಿನ ಪೈಕೆಕ್ಷರರೂ, ಕೊಡಗು ಕಂಪೆನಿಯ ಪೈಕೆಕ್ಷರರೂ, ಮತ್ತು ಸಹಕಾರ ಚಳವಳಿ ದ ಒಬ್ಬ ನುರಿತ ಕಾರ್ಯಕರ್ತರೂ ಆಗಿದ್ದ ಶನಿವಾರಸಂತೆಯ ಶ್ರೀ. ಎಚ್. ಪಿ. ಪುಪ್ಪಣ್ಣನವರು ತಾರೀಕು ೨ ರಲ್ಲಿ ಮಡಿಕೇರಿ ಆಸ್ಪತ್ರೆಯಲ್ಲಿ ಶಿವಾಧೀನರಾದರು. ಶ್ರೀಯುತರ ಆರೋಗ್ಯವು ಹಲವು ದಿನಗಳಿಂದ ಚೆನ್ನಾಗಿಲ್ಲದಿದ್ದರೂ ಆದನ್ನು ಲೆಕ್ಕಿಸದೆ ತಮ್ಮ ಕಡೆಯ ಉಸಿರಿನ ತನಕ ಸಾರ್ವಜನಿಕ ಸೇವೆ ಮಾಡಿದ್ದಾರೆ. ಅನರು ಇತ್ತೀಚೆಗೆ ಶತಪ್ರಯತ್ನದಿಂದ ಶನಿವಾರಸಂತೆಯಲ್ಲಿ ಕಟ್ಟಿಸಿದ ಭವ್ಯವಾಗ ಸಹಕಾರ ಭವನವು ಅವರ ಕರ್ತೃತ್ವಶಕ್ತಿಗೆ ಕಳಸ ಪ್ರಾಯವಾಗಿದೆ. ಶ್ರೀಯುತರು, ಕೊಡಗು ಜಿಲ್ಲಾ ಬೋರ್ಡಿನ ಹಾಗೂ ಶಾಸನ ಸಭೆಯ ಸದಸ್ಯರಾಗಿಯೂ ಕೆಲಸ ಮಾಡಿದವರು. ಇವರ ನಿಧನದಿಂದ ಕೊಡಗಿಗೆ ತುಂಬಾ ಹಾನಿಯಾಗಿದೆ. ಕೊಡಗು ಪ್ರತ್ಯೇಕ ಪಕ್ಷವು ಒಬ್ಬ ಯೋಗ್ಯ ಕಾರ್ಯಕರ್ತನನ್ನೂ, ಕೊಡಗಿನ ಸಹಕಾರ ಚಳವಳವು ಪ್ರಾಮುಖ್ಯ ಸಹಕಾರಿಯೊಬ್ಬನನ್ನೂ ಕಳಕೊಂಡವು. ಇವರ ಆತ್ಮಕ್ಕೆ ಚಿರಂತನ ಶಾಂತಿಯನ್ನೂ ಇವರ ಕುಟುಂಬಕ್ಕೆ ದುಃಖಸಹನಾಶಕ್ತಿಯನ್ನೂ ಭಗವಂತನು ಕೊಡಲೆಂದು ಪ್ರಾರ್ಥಿಸುವೆವು.

ವರ್ತಮಾನ.

ಕೊಡವ ವಿದ್ಯಾನಿಧಿಯ ವಾರ್ಷಿಕ ಮಹಾಸಭೆಯು ತಾ. ೧೭-೯-೫೧ ರಲ್ಲಿ ಬೆಳಿಗ್ಗೆ ೧೧ ಗಂಟೆಗೆ ಮಡಿಕೇರಿ ಕೊಡವ ಸಮಾಜ ಕಟ್ಟಡದಲ್ಲಿ ನಡೆಯುವದು.

ಮದ್ರಾಸು ವೆಟೆರ್‌ನರಿ ಕಾಲೇಜಿನಲ್ಲಿ ತರಬೇತು ಹೊಂದುತ್ತಿದ್ದ ಶ್ರೀ. ಚೆಕ್ಕೆರ ಗಣಪತಿಯವರಿಗೆ ಆ ಕಾಲೇಜಿನ ಪತ್ರಿಕೆಯ ವಾರ್ಷಿಕ ಸಂಚಿಕೆಯಲ್ಲಿ ೧೯೫೧ನೇ ಸಾಲಿನ ಉತ್ತಮವಾದ ತೇಖನಕ್ಕಾಗಿ ಒಂದು ಚಿನ್ನದ ಮೆಡಲನ್ನು ವೆಟೆರ್‌ನರಿ ಕಾತೇಜ್ ಸಂಘದವರು ಕೊಟ್ಟಿರುವರು.

ಕೇಂದ್ರದಿಂದ ಆಳ್ವಡುವ ಪ್ರಾಂತಗಳಿಂದ ಡೇರಾಡನಿನ ಪ್ರಿನ್ಸ್ ಆಫ್ ವೇಲ್ಸ್ ವಿಲಿಟರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಇಬ್ಬರು ಯೋಗ್ಯ ವಿದ್ಯಾರ್ಥಿಗಳಿಗೆ ವಾರ್ಷಿಕ ೧೦೦೦ ರೂಪಾಯಿಗಳಿಗೆ ವಿೂರದ ಎರಡು ವಿದ್ಯಾರ್ಥಿವೇತನಗಳನ್ನು ಪ್ರತಿ ವರ್ಷ ಕೊಡಲಾಗುವದೆಂದೂ ಹೆಚ್ಚಿನ ಮಾಹಿತಿಗೆ ಆಯಾ ಪ್ರಾಂತಗಳ ಚೀಫ್ ಕಮಿಷನರಿಗೆ ಬರೆದುಕೊಳ್ಳಬೇಕೆಂದೂ ತಿಳಿಸುತ್ತಾರೆ.

ಮಹಾತ್ಮಾ ಗಾಂಧಿಯವರ ಹೆಸರು ಮತ್ತು ಚಿತ್ರಗಳನ್ನು 'ಟ್ರೇಡ್ ಮಾರ್ಕ್' ಗಳಾಗಿ ಇಲ್ಲವೇ ಬೇರೆ ವ್ಯಾಪಾರದ ಕಾರಣಗಳಿಗಾಗಿ ಉಪಯೋಗಿಸುವದು ೧೯೫೦ ರ ಎಂಬ್ಲೆಮ್ಸ್ ಮತ್ತು ನೇಮ್ಸ್ ಆಕ್ಟಿಗೆ ವಿರೋಧವಿದ್ದು ಸರಕಾರವು ಆ ಬಗ್ಗೆ ಕ್ರಮ ಕೈಕೊಳ್ಳಬಹುದಾದರೂ ಸಾರ್ವಜನಿಕರು ರಾಷ್ಟ್ರಪಿತನ ಹೆಸರಿನ ದುರುಪಯೋಗದ ಬಗ್ಗೆ ಸರಕಾರವು ಕಾರ್ಯಕ್ರಮ ಕೈಕೊಳ್ಳುವ ತನಕ ಮೂಡದೆ ಸಾರ್ವಜನಿಕರು ಸಹಕರಿಸಬೇಕಾಗಿಯೂ ಹಾಗೆ ರಾಷ್ಟ್ರಪಿತನ ಹೆಸರನ್ನು ದುರುಪಯೋಗಗೊಳಿಸುವವರ ಹೆಸರನ್ನು ಸರಕಾರದ ಅವಗಾಹನೆಗೆ ತರಬೇಕಾಗಿಯೂ ಕೇಳಿಕೊಂಡಿದೆ.

ಅಖಿಲ ಕೊಡಗು ಸಾರ್ವಜನಿಕರಿಗಾಗಿ ಹಾತೂರಿನ ಶ್ರೀ. ಎಚ್. ಬಿ. ಸಿದ್ದೈಯ್ಯನವರು ಇಟ್ಟ ಹಾಕಿ ಪಂದ್ಯಾಟದ ಬಟ್ಟಲಿನ ಈ ವರ್ಷದ ಪಂದ್ಯಾಟವನ್ನು ತಾ. ೨೪-೯-೫೧ ರಿಂದ ನಡೆಯುವುದು.

ಅಮೇರಿಕಾದ ಸುಧಾರಿತ ವ್ಯವಸಾಯ ಕ್ರಮವನ್ನು ನೋಡಲು ಅಮೇರಿಕಾ ಸರಕಾರದವರು ಭಾರತದಿಂದ ಮೂರು ಲಂಜನರನ್ನು ಅಮೇರಿಕಾಕ್ಕೆ ಆಮ್ಹಾನಿಸಿರುವರೆಂದೂ, ಅವರ ಪೈಕಿ ಶ್ರೀ ಅಪ್ಪಾರಂಡ ತಿಮ್ಮಯ್ಯನವರೊಬ್ಬರೆಂದೂ ಇವರು ಈ ತಿಂಗಳಿಂದ ಮುಮೂರು ಮೂರು ತಿಂಗಳುಗಳ ವರೆಗೆ ಅಮೇರಿಕಾದಲ್ಲಿ ಸುತ್ತಾಡಿ ಬರುವರೆಂದೂ ತಿಳಿದು ಬಂದಿದೆ.

ಕೊಡಗು ಸರಕಾರಿ ಕಾಲೇಜಿನ ಕರ್ನಾಟಕ ಸಂಘದ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಶ್ರೀ. ಬಿ. ಎಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಸರ್ವೋದಯ ಪತ್ರಿಕೆಯ ಸಂಪಾದಕರಾದ ಶ್ರೀ. ಎನ್. ಎಸ್. ಕಿಲ್ಲೆಯವರು 'ಮಹಾಭಾರತದ ವೀರರ' ವಿಷಯವಾಗಿ ಭಾಷಣ ಮಾಡಿದರು.

ಜೈಲಿನಿಂದ ತಪ್ಪಿಸಿಕೊಂಡು ಓಡಿ ಹೋಗಿದ್ದ ಪಣಿಯರ ಚಂದ ಎಂಬವನನ್ನು ಕಾನೂರು ಗ್ರಾಮದಲ್ಲಿ ಕೆಲವು ಪೂಪಿಳೈಗಳು ಹಿಡಿದು ಪೊಲೀಸರ ಸ್ವಾಧೀನಕ್ಕೆ ಕೊಟ್ಟಿರುವರೆಂದು ತಿಳಿಯುಬರುತ್ತದೆ.

ಮಡಿಕೇರಿ ಮುನ್ಸಿಪಾಲಿಟಿಯಲ್ಲಿ ದೊಡ್ಡಿಕೇಪರಾಗಿದ್ದ ತಿಮ್ಮಯ್ಯನೆಂಬುವವನು ದೊಡ್ಡಿಗೆ ಬಂದಿದ್ದ ಶ್ರೀ. ಕೊಕ್ಕಲೆರ ಗಣಪತಿಯವರ ಹಸುಗಳನ್ನು ಮೂಡದನೆಂಬ ತಕ್ಸೀರಿನ ಮೇಲೆ ಡೊಡ್ಡಿಕೇಪರನ್ನು ದಸ್ತಗಿರಿ ಮಾಡಿ ವಿಚಾರಣೆ ನಡೆಯುತ್ತಿದೆ.

ಸೆಂಟ್ರಲ್ ಎಕ್ಸೈಸ್ ಇಲಾಖೆಯ ಸುಪರಿಂಟೆಂಡೆಂಟರ ಮಡಿಕೇರಿ ಖಜೇರಿಯನ್ನು ತಾರೀಕು ೧-೯-೫೧ ರಿಂದ ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕಿನ ಸಿಲ್ವರ್ ಜ್ಯುಬಿಲಿ ಕಟ್ಟಡಕ್ಕೆ ವರ್ಗಾಯಿಸಿರುವರು.

ಸಾರ್ವಜನಿಕ ಸಭೆಗಳು.

ಕಾರ್ಗುಂದ

ತಾ. ೨೩ನೇ ಗುರುವಾರ ಕಾರ್ಗುಂದದಲ್ಲಿ ಶ್ರೀ ಪಟ್ಟಮಾಡ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಶ್ರೀ ಪಿ. ಬಿ. ಬೆಳ್ಯಪ್ಪನವರು ಇಂಡಿಯಾ ಸರಕಾರದವರು ಕೊಡಗಿಗೆ ಜವಾಬ್ದಾರಿ ಸರಕಾರವನ್ನು ಕೊಡಲು ಮಾಡಿದ ತೀರ್ಮಾನವನ್ನು ವಿವರಿಸಿ ಭಾಷಣ ಮಾಡಿದರು. ಇದಕ್ಕೆ ಒತ್ತಾಸೆಯಾಗಿ ಶ್ರೀ ದೇಂಗೋಡಿ ಸಂಬ್ಬಯ್ಯನವರು ಮತ್ತು ಕುಟ್ಟೇಟಿರ ತಿಮ್ಮಯ್ಯನವರು ಮಾತಾಡಿದ ನಂತರ ಕೆಳಗಿನ ಠರಾವು ಪಾಸಾಯಿತು.

"ಕೊಡಗಿಗೆ ಜವಾಬ್ದಾರಿ ಸರಕಾರವನ್ನು ಕೊಡಲು ಒಪ್ಪಿದ ಕೇಂದ್ರ ಸರಕಾರದ ಏರ್ಪಾಡು ಕೊಡಗಿನ ಜನರಿಗೆ ತುಂಬಾ ತೃಪ್ತಿಯನ್ನು ಉಂಟುಮಾಡಿದೆ. ಇದಕ್ಕಾಗಿ ಈ ಸಭೆಯು ಕೇಂದ್ರ ಸರಕಾರವನ್ನು ಹೃತ್ಪೂರ್ವಕ ವಂದಿಸುತ್ತದೆ."

ಹುದಿಕೇರಿ

ತಾ. ೩ನೇ ಸೋಮವಾರ ಹುದಿಕೇರಿಯಲ್ಲಿ ಒಂದು ಸಾರ್ವಜನಿಕ ವಿೂಟಿಂಗು ನಡೆದು ಇಂಡಿಯಾ ಸರಕಾರಕ್ಕೆ ಕೃತಜ್ಞತೆಯನ್ನು ಸೂಚಿಸುವ ಠರಾವು ಪಾಸಾಯಿತು.

ಸಂತಾಪ ಸೂಚಕ ಸಭೆ.

ಕೊಡಗು ಪ್ರತ್ಯೇಕ ಪಕ್ಷದ ವಿೂಟಿಂಗೊಂದು ಈ ತಾ. ೨ರಲ್ಲಿ ಶ್ರೀ. ಪಿ ಬಿ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆಯಲ್ಲಿ ನಡೆದು ಅಧ್ಯಕ್ಷರು ಆ ದಿನೆ ಸ್ವರ್ಗಸ್ಥರಾದ ಶನಿವಾರಸಂತೆಯ ಶ್ರೀ ಪಿಜ್. ಎಂ. ಪುಪ್ಪಣ್ಣನವರ ಜೀವನ ಕಥೆಯನ್ನೂ ದೇಶ ಸೇವೆಯನ್ನೂ ವಿವರಿಸಿ ಆವರ ನಿಧನದಿಂದ ದೇಶಕ್ಕುಂಟಾದ ನಷ್ಟವನ್ನು ವಿವರಿಸಿದರು. ನಂತರ ಈ ಕೆಳಗಿನ ಸಂತಾಪ ಠರಾವನ್ನು ಎಕಮತ ನಿರ್ಣಯ ವಾಗಿ ಅಂಗೀಕರಿಸಲಾಯಿತು.

'ಕೊಡಗನ್ನು ಪ್ರತ್ಯೇಕ ಇಟ್ಟುಕೊಂಡು ಸುಧಾರಣೆ ಪಡೆಯಬೇಕೆಂದು ದೀರ್ಘಕಾಲದಿಂದ ಶ್ರಮಿಸುತ್ತಿದ್ದ ಶ್ರೀ ಎಜ್. ಎಂ. ಪುಪ್ಪಣ್ಣನವರ ಅಕಾಲ ಮರಣದಿಂದ ಕೊಡಗು ದೇಶಕ್ಕೆ ತುಂಬಾ ವರ್ಷ ಉಂಟಾಗಿದೆಯೆಂದೂ ಅವರ ನಿಧನಕ್ಕೆ ಈ ಸಭೆಯು ಸಂತಾಪವನ್ನು ಸೂಚಿಸಿ ಅವರ ಆತ್ಮಕ್ಕೆ ಶಾಂತಿಯನ್ನೂ, ಅವರ ಕುಟುಂಬಕ್ಕೆ ದುಃಖ ಸಹನಾ ಶಕ್ತಿಯನ್ನೂ ಭಗವಂತನು ಕೊಡಲೆಂದೂ ಪ್ರಾರ್ಥಿಸುತ್ತದೆ.'

ವೀರಾಜಪೇಟೆ.

ಈ ತಾ. ೫ನೇ ಬುಧವಾರ ವೀರಾಜಪೇಟೆಯಾಡಿನವರ ಸಾರ್ವಜನಿಕ ಸಭೆಯೊಂದು ರೀಡಿಂಗ್ ರೂಮಿನ ಎದುರುಗಡೆ ಶ್ರೀ ಬಿ. ಎಂ. ಸಂಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಪಿ, ಬಿ. ಬೆಳ್ಯಪ್ಪನವರು, ದಿ. ಪುಪ್ಪಣ್ಣನವರ ಗುಣಕಥನ ಮಾಡಿ ಅವರ ದೇಶ ಸೇವೆಯನ್ನು ವರ್ಣಿಸಿದನಂತರ ಮೇಲಿನ ರೀತಿಯ ಸಂತಾಪ ಠರಾವು ಪಾಸಾಯಿತು.

೨-೧೦-೫೧ ರೊಳಗೆ ಆಂಧ್ರ ಪ್ರಾಂತವಾಗಬೇಕೆಂದು ಉಪವಾಸ ಹೂಡಿ ಉಪವಾಸದ ೨೨ನೆಯ ದಿನದಲ್ಲಿ ಕಾಲಿಟ್ಟಿರುವ ಆಂಧ್ರ ಪ್ರದೇಶ ಧುರೀಣರಾದ ಸ್ವಾಮಿ ಸೀತಾರಾಮಯ್ಯ ಅತಿ ಅಶಕ್ತರಾಗಿ ಸೊರಗಿದ್ದಾರೆಂದು ವೈದ್ಯರ ಪ್ರಕಟನೆ ಹೊರಟಿದೆ. ಅವರನ್ನು ಪರೀಕ್ಷಿಸಿದ ಡಾಕ್ಟರರು ಹೆದರಲು ಕಾರಣವಿಲ್ಲೆಂದು ಅಭಿಪ್ರಾಯಪಡಿಸಿದ್ದಾರೆ. ಆದರೆ ಅವರ ಅನುಯಾಯಿಗಳೊಬ್ಬಶ ಪರಿಸ್ಥಿತಿಯು ಚಿಂತಾಜನಕವಿದ್ದು ರಕ್ತದ ಒತ್ತಡವು ಹೆಚ್ಚಾಗಿದೆ.